RNI: KARKAN\2019\78042



ಸಂಪಾದಕರು : ಸಿ.ಎನ್.ಸಮಗಂಡಿ.

# ಸತ್ಯಮಿಥ್ಯ

ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ

Satyamithi Kannada Daily Morning

ಚನ್ನು ಮೆನ್ಸ್‌ವೇರ್
ಚನ್ನು ಸ್ಟಿಚ್‌ವರ್ಲ್ಡ್
ಜೇಂಟ್ಸ್ ಸ್ಪೇಷಲಿಷ್ಟ ಟೇಲರ್
ಗಜೇಂದ್ರಗಡ–582114.
ಸೆಲ್ : 9986982482, 9686165708

ನೂತನ ಎಸ್‌ಡಿಎಂಸಿ ಸದಸ್ಯರ ಪದಗ್ರಹಣ, 30 ಸಾವಿರ ದೇಣಿಗೆ ≫2

ಪೂಜೆ ಯಾಂತ್ರಿಕವಾಗದೆ, ಆಂತರಿಕ ಭಕ್ತಿಯಿಂದ ಕೂಡಿರಲಿ: ಮಲ್ಲಿಕಾರ್ಜುನ ಶಿವಾಚಾರ್ಯರು ≫3

ಗಾನಯೋಗಿ ಪುಟ್ಟರಾಜರ ಪುಣ್ಯಸ್ಮರಣೆ; ಮಳೆಗಾಗಿ ಭಕ್ತನ ಉರುಳು ಸೇವೆ ≫4

ಸಂಪುಟ(Volume): 1 ಸಂಚಿಕೆ (Issue): 69 ● ಪುಟ (Page): 4 ● ದರ: Rs. 4 ಶುಕ್ರವಾರ 18 ಸೆಪ್ಟೆಂಬರ್ 2026 ● 18 SEPTEMBER 2026 ● ಧಾರವಾಡ ● ಹಾವೇರಿ ● ಗದಗ ● ಕೊಪ್ಪಳ ● ವಿಜಯನಗರ ● ರಾಯಚೂರು ● ವಿಜಯಪುರ ● ಬಾಗಲಕೋಟೆ

# ಭಾರತ ಜಾಗತಿಕ ಚಿಪ್ ಉತ್ಪಾದನೆಯ ವಿಶ್ವಾಸಾರ್ಹ ಕೇಂದ್ರ: ಪ್ರಧಾನಿ ಮೋದಿ

**ಸತ್ಯಮಿಥ್ಯ ನ್ಯೂಸ್ ಡೆಸ್ಕ್ ನವದೆಹಲಿ:**
ಭಾರತವು ಜಾಗತಿಕ ಚಿಪ್ ಉತ್ಪಾದನೆಗೆ ವಿಶ್ವಾಸಾರ್ಹ ಕೇಂದ್ರವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಹೇಳಿದ್ದಾರೆ. ಉದ್ಯಮದ ಯಶಸ್ಸನ್ನು ಖಚಿತಪಡಿಸಿಕೊಳ್ಳಲು ನೀತಿಗಳು ಮತ್ತು ಚೌಕಟ್ಟುಗಳನ್ನು ಸಕ್ರಿಯಗೊಳಿಸುವುದು ಸೇರಿದಂತೆ ಸರ್ಕಾರವು ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ಅವರು ತಿಳಿಸಿದರು.
SEMICON ಇಂಡಿಯಾ 2026 ರ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಪ್ರಧಾನಿ, ಸೆಮಿಕಂಡಕ್ಟರ್ ಪರಿಸರ ವ್ಯವಸ್ಥೆಯು ವೇಗವಾಗಿ ವಿಸ್ತರಿಸುತ್ತಿದ್ದು, ನಾವೀನ್ಯತೆ, ಹೂಡಿಕೆ ಮತ್ತು ಬೆಳವಣಿಗೆಗೆ ಹೊಸ ಅವಕಾಶಗಳನ್ನು ತೆರೆಯುತ್ತಿದೆ ಎಂದರು.
ಚಿಪ್ ಉತ್ಪಾದನೆಗಾಗಿ ಜಗತ್ತಿಗೆ ಹೊಸ ಹಾಗೂ ವಿಶ್ವಾಸಾರ್ಹ ಸ್ಥಳಗಳ ಅಗತ್ಯವಿದ್ದು, ಭಾರತವು ಇದಕ್ಕಾಗಿ ತನ್ನನ್ನು ಸಿದ್ಧಪಡಿಸಿಕೊಳ್ಳುತ್ತಿದೆ. ಅಲ್ಲದೆ ಸೆಮಿಕಂಡಕ್ಟರ್ ಉತ್ಪಾದನೆಗೆ ಆದ್ಯತೆಯ ತಾಣವಾಗಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಅವರು ಹೇಳಿದರು.
ಇಲ್ಲಿಯವರೆಗೆ 12 ಚಿಪ್ ತಯಾರಿಕೆ ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಮುಂದಿನ ಹಂತದಲ್ಲಿ ಈ ಸಂಖ್ಯೆ ಮತ್ತಷ್ಟು ಹೆಚ್ಚಾಗಲಿದೆ ಎಂದು ಪ್ರಧಾನಿ ಗಮನಿಸಿದರು. ಇಂಡಿಯಾ ಸೆಮಿಕಂಡಕ್ಟರ್ ಮಿಷನ್ 2.0 ಮೊದಲ ಹಂತದಲ್ಲಿ 8 ಬಿಲಿಯನ್ ಯುಎಸ್‌ಡಿ ಯಿಂದ 13.5 ಬಿಲಿಯನ್ ಯುಎಸ್‌ಡಿಗೆ ವಿನಿಯೋಗಿಸಿದೆ ಎಂದು ತಿಳಿಸಿದ ಅವರು, ತಯಾರಕರು ಯಶಸ್ವಿಯಾಗಲು ಬೇಕಾದ ನೀತಿ ಮತ್ತು ನಿಯಂತ್ರಕ ಚೌಕಟ್ಟುಗಳನ್ನು ಖಚಿತಪಡಿಸಿಕೊಳ್ಳಲು ಸರ್ಕಾರ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದೆ ಎಂದರು.
ಕಿ1 ಉಆಕ ಬೆಳವಣಿಗೆ ಮತ್ತು ಜಪಾನಿನ ರೇಟಿಂಗ್ ಏಜೆನ್ಸಿ ಎಅಖಂ



ಯ ಭಾರತದ ರೇಟಿಂಗ್ ಅಪ್‌ಗ್ರೇಡ್ ಉಲ್ಲೇಖಿಸಿದ ಅವರು, ಭಾರತದ ಆರ್ಥಿಕತೆ ವೇಗವಾಗಿ ವಿಸ್ತರಿಸುತ್ತಿದ್ದು, ದೇಶದ ಮೇಲಿನ ವಿಶ್ವದ ವಿಶ್ವಾಸವೂ ಹೆಚ್ಚುತ್ತಿದೆ ಎಂದರು.
ಎಲೆಕ್ಟ್ರಾನಿಕ್ ಉತ್ಪಾದನೆಯನ್ನು ಬಲಪಡಿಸಲು ಹಾಗೂ ಜಾಗತಿ–ಕ ಪೂರೈಕೆ ಸರಪಳಿಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು, ಚಿಪ್ ವಿನ್ಯಾಸ ಮತ್ತು ಜೋಡಣೆಯನ್ನು ಮೀರಿ ಫ್ಯಾಬ್ರಿಕೇಶನ್, ಸುಧಾರಿತ ಪ್ಯಾಕೇಜಿಂಗ್, ಉಪಕರಣಗಳು, ಸಾಮಗ್ರಿಗಳು, ಸಂಶೋಧನೆ ಮತ್ತು ಪ್ರತಿಭೆಗೆ ವಿಸ್ತರಿಸುವ ಮೂಲಕ ಸಂಪೂರ್ಣ ಸೆಮಿಕಂಡಕ್ಟರ್ ಪರಿಸರ ವ್ಯವಸ್ಥೆಯನ್ನು ನಿರ್ಮಿಸಲು ಭಾರತ ಪ್ರಯತ್ನಿಸುತ್ತಿದೆ.
ಕೇಂದ್ರೀಕೃತ ಉತ್ಪಾದನಾ ಕೇಂದ್ರಗಳಿಂದ ಅರೆವಾಹಕ ಪೂರೈ–ಕೆ ಸರಪಳಿಗಳನ್ನು ವೈವಿಧ್ಯಗೊಳಿಸಲು ಜಾಗತಿಕ ಒತ್ತಡವಿರುವುದು ಭಾರತವನ್ನು ಪ್ರಮುಖ ಚಿಪ್‌ಮೇಕಿಂಗ್ ಮತ್ತು ಎಲೆಕ್ಟ್ರಾನಿಕ್ಸ್ ಉತ್ಪಾದನಾ ಕೇಂದ್ರವಾಗಿ ಇರಿಸಲು ನೆರವಾಗಲಿದೆ. ಶತಕೋಟಿ ಡಾಲರ್‌ಗಳ ಪ್ರೋತ್ಸಾಹದೊಂದಿಗೆ, ಎಂಜಿನಿಯರಿಂಗ್ ಪ್ರತಿಭೆ, ವಿಶಾಲ ಗ್ರಾಹಕ ಮಾರುಕಟ್ಟೆ ಮತ್ತು ಕಾರ್ಯತಂತ್ರದ ಸ್ಥಾನವನ್ನು ಬಳಸಿಕೊಂಡು ಚಿಪ್ ವಿನ್ಯಾಸ, ಫ್ಯಾಬ್ರಿಕೇಶನ್, ಪ್ಯಾಕೇಜಿಂಗ್ ಮತ್ತು ಪರೀಕ್ಷೆಯನ್ನು ಒಳಗೊಂಡ ಪೂರ್ಣ–ಸ್ಟಾಕ್ ಉದ್ಯಮ ನಿರ್ಮಿಸಲು ಜಾಗತಿಕ ತಯಾರಕರನ್ನು ಭಾರತ ಸೆಳೆಯುತ್ತಿದೆ.
ಇದೇ ವೇಳೆ ಗುರುವಾರ, ಅಪ್ಲೈಡ್ ಮೆಟೀರಿಯಲ್ಸ್ ಸಂಸ್ಥೆಯು ಭಾರತದ ಸೆಮಿಕಂಡಕ್ಟರ್ ಪರಿಸರ ವ್ಯವಸ್ಥೆಯನ್ನು ಜಾಗತಿಕ ಮೌಲ್ಯ ಸರಪಳಿಯಲ್ಲಿ ಸಂಯೋಜಿಸಲು 'ವಿಷನ್ 2035' ರ ಅಡಿಯಲ್ಲಿ 5 ಬಿಲಿಯನ್ ಯುಎಸ್‌ಡಿ ಹೂಡಿಕೆಯನ್ನು ಘೋಷಿಸಿತು.

## ಕಲ್ಯಾಣ ಕರ್ನಾಟಕ ರಾಜ್ಯದ ಶಕ್ತಿಪೀಠ: ನವ ಕರ್ನಾಟಕ ನಿರ್ಮಾಣಕ್ಕೆ ಸರ್ಕಾರ ಬದ್ಧ

**ಸತ್ಯಮಿಥ್ಯ ಸುದ್ದಿಮೂಲ ಕಲಬುರಗಿ:**
ನಾವು ಮತಕ್ಕಾಗಿ ಅಲ್ಲ, ರಾಜ್ಯದ ಹಿತಕ್ಕಾಗಿ ಕೆಲಸ ಮಾಡುತ್ತೇವೆ. ಪ್ರಜಾಸೇವೆಯೇ ದೇವರ ಸೇವೆ ಎಂಬ ತತ್ವದೊಂದಿಗೆ ಸರ್ಕಾರವನ್ನೇ ಜನರ ಮನೆ ಬಾಗಿಲಿಗೆ ತಂದು ಸಮಸ್ಯೆಗಳನ್ನು ಪರಿಹರಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆಯಲ್ಲಿ ಹೇಳಿದರು.
ಪ್ರತಿ 2ನೇ ಹಾಗೂ 4ನೇ ಶನಿವಾರ ಸಚಿವರು, ಶಾಸಕರು ಸೇರಿದಂತೆ ಜನಪ್ರತಿನಿಧಿಗಳು ಜಿಲ್ಲೆ, ತಾಲೂಕು ಮತ್ತು ಹೋಬಳಿ ಮಟ್ಟದಲ್ಲಿ 'ಪ್ರಜಾಸೇವೆ' ಅಭಿಯಾನವನ್ನು ನಡೆಸುತ್ತಿದ್ದಾರೆ.
ಕೊಪ್ಪಳದ ನವಲಿಯಲ್ಲಿ ತುಂಗಭದ್ರಾ ಅಣೆಕಟ್ಟೆಗೆ ಸಮತೋಲನ ಜಲಾಶಯ ನಿರ್ಮಿಸಲು ನಿರ್ಧರಿಸಲಾಗಿದೆ. ಕೇಂದ್ರ ಜಲಶಕ್ತಿ ಸಚಿವರಾದ ಸಿ.ಆರ್. ಪಾಟೀಲ್ ಅವರ ನೇತೃತ್ವದಲ್ಲಿ ಕರ್ನಾಟಕ, ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳ ಮುಖ್ಯಮಂತ್ರಿಗಳನ್ನು ಒಂದೇ ವೇದಿಕೆಯಲ್ಲಿ ಸೇರಿಸಿ ಈ ನಿರ್ಣಯ ಕೈಗೊಳ್ಳಲಾಗಿದೆ.
ಕಳೆದ 12 ವರ್ಷಗಳಲ್ಲಿ ಕಲ್ಯಾಣ ಕರ್ನಾಟಕಕ್ಕೆ ಸುಮಾರು 25,000 ಕೋಟಿ ವಿಶೇಷ ಅನುದಾನ ನೀಡಲಾಗಿದ್ದು, ಅದರಲ್ಲಿ 14,000 ಕೋಟಿ ವೆಚ್ಚ ಮಾಡಲಾಗಿದೆ. ಒಟ್ಟು 41,103 ಕಾಮಗಾರಿಗಳಲ್ಲಿ 32,985 ಕಾಮಗಾರಿಗಳು ಪೂರ್ಣಗೊಂಡಿ–ದ್ದು, 8,118 ಕಾಮಗಾರಿಗಳು ಪ್ರಗತಿಯಲ್ಲಿವೆ. ಪ್ರತಿವರ್ಷ ಸರ್ಕಾರ 5,000 ಕೋಟಿ ಅನುದಾನ ನೀಡುತ್ತಿದೆ.
ಆರ್ಟಿಕಲ್ 371(ಜೆ) ಜಾರಿಯಾದ ನಂತರ 79,383 ಯುವಕರಿಗೆ ಉದ್ಯೋಗ ಕಲ್ಪಿಸಲಾಗಿದೆ. ಪ್ರಸ್ತುತ 72,000 ಹುದ್ದೆಗಳ ನೇಮಕಾತಿ ನಡೆಯುತ್ತಿದ್ದು, ಇದರಲ್ಲಿ 32,000 ಹುದ್ದೆಗಳು ಈ ಭಾಗದ ಜನರಿಗೆ ದೊರೆಯಲಿವೆ.
ಯಾದಗಿರಿ, ಕೊಪ್ಪಳ ಮತ್ತು ಬೀದರ್‌ನಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಸ್ಥಾಪಿಸಲಾಗುತ್ತಿದೆ. ಇಂದಿರಾ ಗಾಂಧಿ ತಾಯಿ–ಮಕ್ಕಳ ಆಸ್ಪತ್ರೆ, ಕಿದ್ವಾಯಿ, ಜಯದೇವ ಆಸ್ಪತ್ರೆಗಳ ವಿಸ್ತರಣೆಗೆ 423 ಕೋಟಿ ವೆಚ್ಚ ಮಾಡಲಾಗುತ್ತಿದ್ದು, ಆರೋಗ್ಯ ಕ್ಷೇತ್ರಕ್ಕೆ ಒಟ್ಟಾರೆಯಾಗಿ 1,797 ಕೋಟಿ ಒದಗಿಸಲಾಗಿದೆ.
ಶಿಕ್ಷಣ ಮತ್ತು 350 ಏಕಖ ಶಾಲೆಗಳ ನಿರ್ಮಾಣದ ಗುರಿ ಹೊಂದಲಾಗಿದೆ. 371(ಜೆ) ಅಡಿಯಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ 10,000ಕ್ಕೂ ಹೆಚ್ಚು ಹಾಗೂ ಇಂಜಿನಿಯರಿಂಗ್‌ನಲ್ಲಿ 31,000ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರವೇಶ ಸಿಕ್ಕಿದೆ.
'ಕಲ್ಯಾಣಪಥ' ಯೋಜನೆಯಡಿ 38 ವಿಧಾನಸಭಾ ಕ್ಷೇತ್ರಗಳಲ್ಲಿ 1,150 ಕಿ.ಮೀ. ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ 1,000 ಕೋಟಿ ನೀಡಲಾಗಿದೆ. ಪ್ರತಿ ಕ್ಷೇತ್ರಕ್ಕೆ 120 ಕೋಟಿ ತೆಗೆದಿರಿಸಲಾಗಿದೆ.
ಕಲಬುರಗಿಯಲ್ಲಿ ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ 11,770 ಕೋಟಿ ಮೊತ್ತದ ಬೃಹತ್ ಯೋಜನೆಗಳಿಗೆ ನಿರ್ಧಾರ ಕೈಗೊಳ್ಳಲಾಗಿದೆ.
ಕಲಬುರಗಿಯಲ್ಲಿ 120ಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳು ಸ್ಥಾಪನೆಯಾಗಿದ್ದು, 2030ರ ವೇಳೆಗೆ 500ಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳ ಗುರಿ ಹೊಂದಲಾಗಿದೆ. ಸಣ್ಣ ಕೈಗಾರಿಕೆಗಳಿಗೆ 200 ಕೋಟಿ ಹಾಗೂ ಕುಡಿಯುವ ನೀರಿನ ಯೋಜನೆಗಳಿಗೆ 7,200 ಕೋಟಿ ವಿನಿಯೋಗಿಸಲಾಗುತ್ತಿದೆ.

ಐತಿಹಾಸಿಕ ಕೊಡುಗೆಗಳ
ಕಾಂಗ್ರೆಸ್ ಹೋರಾಟದಿಂದಾಗಿ ಕಲ್ಯಾಣ ಕರ್ನಾಟಕಕ್ಕೆ ನಿಜಾಮರ ಆಡಳಿತದಿಂದ ವಿಮೋಚನೆ ದೊರೆಯಿತು. ಸರ್ದಾರ್ ವಲ್ಲಭಭಾಯಿ ಪಟೇಲ್ ಮತ್ತು ಜವಾಹರಲಾಲ್ ನೆಹರು ಅವರು ಈ ಭಾಗವನ್ನು ಕಾಪಾಡಿದರು. ಧರಂಸಿಂಗ್ ಅವರ ವರದಿ ಆಧಾರದ ಮೇಲೆ 1990ರಲ್ಲಿ ಹೈದರಾಬಾದ್–ಕರ್ನಾಟಕ ಅಭಿವೃದ್ಧಿ ಮಂಡಳಿ ಸ್ಥಾಪನೆಯಾಯಿತು.
ಸೋನಿಯಾ ಗಾಂಧಿ, ಡಾ. ಮನಮೋಹನ್ ಸಿಂಗ್ ಹಾಗೂ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರ ಶ್ರಮದಿಂದ 371(ಜೆ) ವಿಶೇಷ ಸ್ಥಾನಮಾನ ದೊ–ರೆತಿದೆ. ಖರ್ಗೆಯವರು ಬೃಹತ್ ಇ ಎಸ್ ಐ ಆಸ್ಪತ್ರೆ, ಕಲಬುರಗಿ–ವಾಡಿ ಮತ್ತು ಬೀದರ್–ಕಲಬುರಗಿ ಹೊಸ ರೈಲ್ವೇ ಮಾರ್ಗಗಳು ಹಾಗೂ 27 ಹೊಸ ರೈಲುಗಳನ್ನು ಮಂಜೂರು ಮಾಡಿಸಿದ್ದಾರೆ. ಅಲ್ಲದೆ, ಬಂಜಾರ ಸಮುದಾಯವನ್ನು ಪರಿಶಿಷ್ಟ ಪಟ್ಟಿಗೆ ಸೇರ್ಪಡೆಗೊಳಿಸಿದ್ದು ಕಾಂಗ್ರೆಸ್ ಸರ್ಕಾರವೇ ಆಗಿದೆ. ನವ ಕರ್ನಾಟಕ ಮತ್ತು ಸದೃಢ ಕರ್ನಾಟಕ ನಿರ್ಮಾಣವೇ ಸರ್ಕಾರದ ಮುಖ್ಯ ಸಂಕಲ್ಪವಾಗಿದೆ ಎಂದು ಡಿ ಕೆ ಶಿವಕುಮಾರ ಸುದೀರ್ಘವಾಗಿ ಮಾತನಾಡಿದರು .



## ಗಾಣಗಾಪುರ ದತ್ತನ ದರ್ಶನ ಪಡೆದ ಸಿಎಂ ಡಿ.ಕೆ. ಶಿವಕುಮಾರ್

**ಸತ್ಯಮಿಥ್ಯ ಸುದ್ದಿಮೂಲ ಗಾಣಗಾಪುರ:**
ಕಲ್ಯಾಣ ಕರ್ನಾಟಕ ವಿಮೋಚನಾ ದಿನದ ಅಂಗವಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಗುರುವಾರ ಅಫಜಲಪುರ ತಾಲೂಕಿನ ಪವಿತ್ರ ಶ್ರೀ ಕ್ಷೇತ್ರ ಗಾಣಗಾಪುರಕ್ಕೆ ಭೇಟಿ ನೀಡಿ ಶ್ರೀ ದತ್ತಾತ್ರೇಯ ಸ್ವಾಮಿಯ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.
ಗಾಣಗಾಪುರಕ್ಕೆ ಆಗಮಿಸಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ನಾಸಿಕ್ ಡೋಲ್‌ಗಳ ಸದ್ದಿನೊಂದಿಗೆ ಅದ್ದೂರಿಯಾಗಿ ಸ್ವಾಗತಿಸಲಾಯಿತು. ಬಳಿಕ ಶ್ರೀ ದತ್ತಾತ್ರೇಯ ದೇವಸ್ಥಾನಕ್ಕೆ ತೆರಳಿದ ಅವರು ವಿಶೇಷ ಪೂಜೆ ಸಲ್ಲಿಸಿ, ನಾಡಿನ ಒಳಿತಿಗಾಗಿ ಹಾಗೂ ರಾಜ್ಯದ ಸಮೃದ್ಧಿ ಮತ್ತು ಕಲ್ಯಾಣಕ್ಕಾಗಿ ಪ್ರಾರ್ಥಿಸಿದರು.
ಗಾಣಗಾಪುರ ಕ್ಷೇತ್ರವು ಶ್ರೀ ದತ್ತಾತ್ರೇಯ ಸ್ವಾಮಿಯ ಅವತಾರವೆಂದು ಭಕ್ತರು ಪೂಜಿಸುವ ಶ್ರೀ ನರಸಿಂಹ ಸರಸ್ವತಿ ಮಹಾರಾಜರೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವ ಪ್ರಸಿದ್ಧ ದತ್ತಕ್ಷೇತ್ರವಾಗಿದೆ. ಶ್ರೀ ನರಸಿಂಹ ಸರಸ್ವತಿ ಅವರು ಇಲ್ಲಿ ದೀರ್ಘಕಾಲ ನೆಲೆಸಿದ್ದರು ಎಂಬುದು ಕ್ಷೇತ್ರದ ಧಾರ್ಮಿಕ ಪರಂಪರೆಯಲ್ಲಿ ಮಹತ್ವ ಪಡೆದಿದೆ.
"ಜಟಾಧರಂ ಪಾಂಡುರಂಗಂ ಶೂಲಹಸ್ತಂ ಕೃಪಾನಿಧಿಮ್।
ಸರ್ವರೋಗಹರಂ ದೇವಂ ದತ್ತಾತ್ರೇಯಮಹಂ ಭಜೇ॥"
ಎಂಬ ಶ್ಲೋಕದೊಂದಿಗೆ ಭಕ್ತಿಭಾವದಿಂದ ದತ್ತನ ದರ್ಶನ ಪಡೆದ ಮುಖ್ಯಮಂತ್ರಿ, ಶತಮಾನಗಳ ಧಾರ್ಮಿಕ ಪರಂಪರೆ ಹೊಂದಿರುವ ಈ ಪುಣ್ಯಕ್ಷೇತ್ರಕ್ಕೆ ಭೇಟಿ ನೀಡಿರುವುದು ಪುಣ್ಯದ ಕ್ಷಣ ಎಂದು ಭಾವಿಸಿದರು.
ಕಲ್ಯಾಣ ಕರ್ನಾಟಕ ವಿಮೋಚನಾ ದಿನದ ಸಂಭ್ರಮದ ಸಂದರ್ಭದಲ್ಲಿ ಗಾಣಗಾಪುರ ದತ್ತಾತ್ರೇಯ ದೇವಸ್ಥಾನಕ್ಕೆ ಮುಖ್ಯಮಂತ್ರಿ ಜೊತೆಗೆ ಗೃಹ ಸಚಿವ ಪ್ರಿಯಾಂಕಾ ಖರ್ಗೆ ಸಾಥ್ ನೀಡಿರುವುದು ಕ್ಷೇತ್ರದ ಭಕ್ತರಲ್ಲಿ ವಿಶೇಷ ಗಮನ ಸೆಳೆಯಿತು.



## ಉಕ್ಕಡಗಾತ್ರಿ ದೇವಸ್ಥಾನಕ್ಕೆ ತೆರಳಿದ್ದ ವ್ಯಕ್ತಿ ನಿಗೂಢ ಸಾವು

**ರಾಣೆಬೆನ್ನೂರು:** ಮೈಯಲ್ಲಿ ಗಾಳಿಸೆಕ ಆಗಿದೆ ಎಂದು ಉಕ್ಕಡಗಾತ್ರಿ ಕರಿಬಸವೇಶ್ವರ ದೇವರ ದರ್ಶನಕ್ಕೆ ಬಂದ ವ್ಯಕ್ತಿಯೊಬ್ಬನ ಎರಡು ಕೈಗಳನ್ನು ಬೆನ್ನ ಹಿಂದೆ ಬಟ್ಟೆಯಿಂದ ಕಟ್ಟಿ ತುಂಗಭದ್ರಾ ನದಿಗೆ ತಳ್ಳಿ ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿರುವ ಘಟನೆ ರಾಣೆಬೆನ್ನೂರು ತಾಲೂಕಿನ ನಿಟ್ಟಪಲ್ಲಿ ಗ್ರಾಮದ ಬಳಿ ನಡೆದಿದೆ.



ಗದಗ ಜಿಲ್ಲೆಯ ಗಜೇಂದ್ರಗಡ ತಾಲೂಕಿನ ನರೇಗಲ್ಲ ಗ್ರಾಮದ ಶಿವಪ್ಪ ಕಲ್ಲಪ್ಪ ಗಂಗರಗೊಂಡ (35) ನಿಗೂಢವಾಗಿ ಮೃತಪಟ್ಟ ವ್ಯಕ್ತಿ.
ಈತ ಪೆಂಡಾಲ್ ಹಾಕುವ ಕೆಲಸ ಮಾಡಿಕೊಂಡಿದ್ದರು. ಗಾಳಿಸೆಕ ಆಗಿದೆ ಎಂದು ಸೆ. 10ರಂದು ಹರಿಹರ ತಾಲೂಕಿನ ಉಕ್ಕಡಗಾತ್ರಿ ಗ್ರಾಮದ ಕರಿಬಸವೇಶ್ವರ ದೇವಸ್ಥಾನಕ್ಕೆ ತೆರಳಿ ದೇವರ ದರ್ಶನ ಪಡೆದಿದ್ದರು. ಬಳಿಕ ಊರಿಗೆ ತೆರಳಲು ಒಪ್ಪದೇ ಅಲ್ಲಿಯೇ ಉಳಿದುಕೊಂಡು ದೇವಸ್ಥಾನದ ಆವರಣದಲ್ಲಿ ಮಲಗಿದ್ದರು. ಆದರೆ, ರಾತ್ರಿ ಸಮಯದಲ್ಲಿ ಯಾರೋ ದುಷ್ಕರ್ಮಿಗಳು ದುರುದ್ದೇಶದಿಂದ ಶಿವಪ್ಪನ ಎರಡು ಕೈಗಳನ್ನು ಬೆನ್ನ ಹಿಂದೆ ಬಟ್ಟೆಯಿಂದ ಕಟ್ಟಿ, ನಿಟಪಲ್ಲಿ ಗ್ರಾಮದ ಬಳಿಯಿರುವ ತುಂಗಭದ್ರಾ ನದಿಯ ನೀರಿಗೆ ತಳ್ಳಿ ಅಥವಾ ನೀರಿನಲ್ಲಿ ಉಸಿರುಗಟ್ಟಿಸಿ ಕೊಲೆ ಮಾಡಿರುವ ಶಂಕೆಯಿದೆ ಎಂದು ಆತನ ಕುಟುಂಬದವರು ಪೊಲೀಸರಿಗೆ ನೀಡಿದ ದೂರಿನಲ್ಲಿ ಆರೋಪಿಸಿದ್ದಾರೆ. ಈ ಕುರಿತು ತಾಲೂಕಿನ ಹಲಗೇರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಪೊಲೀಸರು ಶಿವಪ್ಪನ ಸಾವಿನ ಕುರಿತು ನಿಖರ ಕಾರಣ ಹಾಗೂ ಘಟನೆಯಲ್ಲಿ ಯಾರಾದರೂ ಭಾಗಿಯಾಗಿದ್ದಾರೆಯೇ ಎಂಬುದನ್ನು ಪ್ರಾಮಾಣಿಕ ತನಿಖೆ ನಡೆಸುವ ಮೂಲಕ ನಮಗೆ ನ್ಯಾಯ ಒದಗಿಸಿಕೊಡಬೇಕು ಎಂದು ಮೃತನ ಕುಟುಂಬದವರು ಆಗ್ರಹಿಸಿದ್ದಾರೆ.

### ಧಾರವಾಡ ಜಿಲ್ಲೆಯಲ್ಲಿ ಲಂಚಾವತಾರಕ್ಕೊಂದು ದೊಡ್ಡ ಸಾಕ್ಷಿ

## 50 ಲಕ್ಷ ಲಂಚ ಸ್ವೀಕರಿಸುತ್ತಿದ್ದ ತಹಶೀಲ್ದಾರ್ ಲೋಕಾ ಬಲೆಗೆ

**ಧಾರವಾಡ:** ಜಿಲ್ಲೆಯಲ್ಲಿ ಲಂಚಾವತಾರಕ್ಕೊಂದು ದೊಡ್ಡ ಸಾಕ್ಷಿ ಸಿಕ್ಕಿದ್ದು, ಭೂಮಿಯ 'ಅ' ಖರಾಬ್ ತೆಗೆದು ಕೊಡುವುದಕ್ಕಾಗಿ ಬೃಹತ್ ಮೊತ್ತದ ಲಂಚದ ಹಣ ಪಡೆಯುತ್ತಿದ್ದ ಧಾರವಾಡ ತಹಶೀಲ್ದಾರ್ ಸಚ್ಚಿದಾನಂದ ಕುಚನೂರ್ ಲೋಕಾಯುಕ್ತ ಅಧಿಕಾರಿಗಳ ಕಾರ್ಯಾಚರಣೆಯಲ್ಲಿ ರೆಡ್ ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾರೆ. ಮುಂಗಡವಾಗಿ 50 ಲಕ್ಷ ನಗದು ಸ್ವೀಕರಿಸುವಾಗಲೇ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ಅವರನ್ನು ವಶಕ್ಕೆ ಪಡೆದಿದ್ದಾರೆ.
ಬಾಗಲಕೋಟೆ ಜಿಲ್ಲೆ ಮೂಲದ ಮಂಜುನಾಥ್ ಎಂಬ ರಿಯಲ್ ಎಸ್ಟೇಟ್ ಡೆವಲಪರ್, ಧಾರವಾಡ ತಾಲೂಕಿನ ಯರಿಕೊಪ್ಪ ಗ್ರಾಮದ ಬಳಿ ಭೂಮಿ ಖರೀದಿಸಿದ್ದರು. ಈ ಜಮೀನನ್ನು ಡೆವಲಪ್‌ಮೆಂಟ್ ಮಾಡಲು ಉದ್ದೇಶಿಸಿದ್ದ ಮಂಜುನಾಥ್, ಜಮೀನಿನಲ್ಲಿದ್ದ 'ಅ' ಖರಾಬ್ ಭಾಗವನ್ನು ಅಧಿಕೃತವಾಗಿ ತೆಗೆದುಹಾಕಲು ತಾಲೂಕು ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ಆದರೆ, ನಿಯಮಾನುಸಾರ ಕೆಲಸ ಮಾಡಿಕೊಡಬೇಕಿದ್ದ ತಹಶೀಲ್ದಾರ್ ಸಚ್ಚಿದಾನಂದ ಕುಚನೂರ್, ಈ ಕೆಲಸಕ್ಕಾಗಿ ಕಮಿಷನ್ ಬೇಡಿಕೆ ಇಟ್ಟಿದ್ದರು.

**1 ಕೋಟಿ ನಗದು ಮತ್ತು 1 ಎಕರೆ ಜಮೀನಿನ ಬೇಡಿಕೆ!**
ಜಮೀನಿನ ಖರಾಬ್ ತೆಗೆದು ಸರಿಪಡಿಸಿಕೊಡಲು ತಹಶೀಲ್ದಾರ್ ಸಚ್ಚಿದಾನಂದ ಅವರು ಬೃಹತ್ ಮೊತ್ತದ ಆಸೆಗೆ ಬಿದ್ದಿದ್ದರು. ಡೆವಲಪರ್ ಮಂಜುನಾಥ್ ಬಳಿ ಬರೋಬ್ಬರಿ 1 ಕೋಟಿ ನಗದು ಹಣ ಹಾಗೂ 1 ಎಕರೆ ಜಮೀನನ್ನು ತಮ್ಮ ಹೆಸರಿಗೆ ನೀಡುವಂತೆ ಕಟ್ಟುನಿಟ್ಟಿನ ಲಂಚದ ಬೇಡಿಕೆ ಇಟ್ಟಿದ್ದರು. ಲಂಚ ನೀಡಲು ಇಷ್ಟವಿಲ್ಲದ ಡೆವಲಪರ್ ಮಂಜುನಾಥ್ ಈ ಕುರಿತು ಲೋಕಾಯುಕ್ತ ಅಧಿಕಾರಿಗಳಿಗೆ ದೂರು ನೀಡಿದ್ದರು.

**ಲೋಕಾಯುಕ್ತ ಹೈ–ಡ್ರಾಮಾ ಕಾರ್ಯಾಚರಣೆ!:** ದೂರು ದಾಖಲಿಸಿಕೊಂಡ ಲೋಕಾಯುಕ್ತ ಅಧಿಕಾರಿಗಳು ತಹಶೀಲ್ದಾರ್ ಅವರನ್ನು ರೆಡ್ ಹ್ಯಾಂಡ್ ಆಗಿ ಹಿಡಿಯಲು ಪಕ್ಕಾ ಸ್ಕೆಚ್ ಹಾಕಿದ್ದರು. ಮೊದಲ ಕಂತಾಗಿ ₹50 ಲಕ್ಷ ಲಂಚದ ಹಣವನ್ನು ತಹಶೀಲ್ದಾರ್ ಸಚ್ಚಿದಾನಂದ ಅವರಿಗೆ ನೀಡಲು ಸಂಚು ರೂಪಿಸಲಾಗಿತ್ತು. ಅದರಂತೆ ಧಾರವಾಡದಲ್ಲಿ ಹಣ ಸ್ವೀಕರಿಸುತ್ತಿದ್ದ ಕ್ಷಣದಲ್ಲೇ, ಪೂರ್ವನಿಯೋಜಿತವಾಗಿ ನಿಗಾ ವಹಿಸಿದ್ದ ಲೋಕಾಯುಕ್ತ ತಂಡ ದಿಢೀರ್ ದಾಳಿ ನಡೆಸಿದೆ. 50 ಲಕ್ಷ ನಗದು ಹಣದೊಂದಿಗೆ ತಹಶೀಲ್ದಾರ್ ಸಚ್ಚಿದಾನಂದ ಕುಚನೂರ್ ಅವರನ್ನು ರೆಡ್ ಹ್ಯಾಂಡ್ ಆಗಿ ಬಂಧಿಸಲಾಗಿದೆ.

ಸತ್ಯ ಮಿಥ್ಯ
ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ
SATYA MITHI
Kannada Daily Morning

# ವಿಮೋಚನಾ ದಿನದ ಅಂಗವಾಗಿ ಹಾಬಲಕಟ್ಟಿಯಲ್ಲಿ ಸ್ವಚ್ಛತಾ ಅಭಿಯಾನ

**ಸತ್ಯಮಿಥ್ಯ ಸುದ್ದಿಮೂಲ ಹಾಬಲಕಟ್ಟಿ:** ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆ-ಯ ಪ್ರಯುಕ್ತ ಹಾಬಲಕಟ್ಟಿ ಗ್ರಾಮ ಪಂಚಾಯಿತಿ ವತಿಯಿಂದ ಗ್ರಾಮದಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನಾಗೇಶ ಅರಳಗಿನೂರು ಅವರ ನೇತೃತ್ವದಲ್ಲಿ ಪಂಚಾಯಿತಿ ಸಿಬ್ಬಂದಿ ಗ್ರಾಮದ ವಿವಿಧ ಭಾಗಗಳಲ್ಲಿ ಸ್ವಚ್ಛತಾ ಕಾರ್ಯವನ್ನು ಕೈಗೊಂಡರು.

ಈ ಸಂದರ್ಭದಲ್ಲಿ ಡಾಟಾ ಕ್ಲರ್ಕ್ ರಂಗನಾಥ ಮಡಿವಾಳರ, ನಿರಗಂಟಿ ಹನಮಂತ, ಶಂಕರಪ್ಪ ನಾಗರಾಳ, ಸ್ವಚ್ಛವಾಹಿನಿ ಚಾಲಕಿ ಈರಮ್ಮ, ಶಿವಾನಂದ ಮಾದರ, ಮಂಜುನಾಥ ಬಡಿಗೇರಿ, ಸಂಗಪ್ಪ ಬಡಿಗೇರಿ, ಬಸವ ಭೋವಿ, ಈರಮ್ಮ ಸೇರಿದಂತೆ ಗ್ರಾಮ ಪಂಚಾಯಿತಿಯ ಸಿಬ್ಬಂದಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸುವುದರ ಜೊತೆಗೆ, ಸಾರ್ವಜನಿಕರಲ್ಲಿ ಸ್ವಚ್ಛತೆ-ಯ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಈ ಸ್ವಚ್ಛತಾ ಕಾರ್ಯವನ್ನು ಸಂಘಟಿಸಲಾಗಿತ್ತು.



# ನೂತನ ಎಸ್‌ಡಿಎಂಸಿ ಸದಸ್ಯರ ಪದಗ್ರಹಣ, 30 ಸಾವಿರ ದೇಣಿಗೆ

**ಸತ್ಯಮಿಥ್ಯ ಸುದ್ದಿಮೂಲ ಕುಷ್ಟಗಿ:** ತಾಲೂಕಿನ ಗಡಚಿಂತಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆ ಹಾಗೂ ನೂತನ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್ ಡಿ ಎಂ ಸಿ ) ಸದಸ್ಯರ ಪದಗ್ರಹಣ ಕಾರ್ಯಕ್ರಮವು ಸಂಭ್ರಮ ಮತ್ತು ಅರ್ಥಪೂರ್ಣವಾಗಿ ಜರುಗಿತು.

**30 ಸಾವಿರ ಆರ್ಥಿಕ ದೇಣಿಗೆ:** ಕಾರ್ಯಕ್ರಮದ ಅಂಗವಾಗಿ ಶಾಲೆಯ ಸರ್ವಾಂಗೀಣ ಅಭಿವೃದ್ಧಿಗೆ ನೂತನ ಖಆಒಅ ಅಧ್ಯಕ್ಷರಾದ ಶ್ರೀ ಶರಣಪ್ಪ ರಾಮಪ್ಪ ಕೊಪ್ಪಳ ಅವರು ▯25,000 ಹಾಗೂ ಉಪಾಧ್ಯಕ್ಷರಾದ ಶ್ರೀಮತಿ ಪ್ರಭಾವತಿ ರಮೇಶ ಕೆಂಪೋಡಿ ಅವರು ▯5,000 ಸೇರಿದಂತೆ ಒಟ್ಟು ▯30,000 ಆರ್ಥಿಕ ದೇಣಿಗೆಯನ್ನು ನೀಡುವ ಮೂಲಕ ಶಿಕ್ಷಣದ ಮೇಲಿನ ತಮ್ಮ ಕಾಳಜಿಯನ್ನು ಮೆರೆದರು.

**ವಿಮೋಚನಾ ದಿನದ ಮಹತ್ವ:** ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆಯ ಮಹತ್ವದ ಕುರಿತು ಶಾಲೆಯ ಹಿರಿಯ ಶಿಕ್ಷಕರಾದ ಶ್ರೀ ಈರಣ್ಣ ಬಾದವಾಡಗಿ ಅವರು ಮಾತನಾಡಿ, ಪ್ರದೇಶದ ವಿಮೋಚನೆಗಾಗಿ ಹೋರಾಡಿದ ಮಹಾನ್ ಹೋರಾಟಗಾರರ ತ್ಯಾಗ, ಬಲಿದಾನ ಹಾಗೂ ಹೋರಾಟದ ಇತಿಹಾಸವನ್ನು ವಿದ್ಯಾರ್ಥಿಗಳಿಗೆ ವಿವರಿಸಿದರು.

**ಮಕ್ಕಳಿಗೆ ನೂತನ ಸಮವಸ್ತ್ರ ಕೊಡುಗೆ:** ಕಾರ್ಯಕ್ರಮದ ಮತ್ತೊಂದು ವಿಶೇಷವೆಂದರೆ, ಶಾಲೆಯ ಎಲ್ಲಾ ವಿದ್ಯಾರ್ಥಿಗಳ ಪೋಷಕರು ಒಗ್ಗೂಡಿ ಮಕ್ಕಳಿಗೆ ನೂತನ ಸಮವಸ್ತ್ರಗಳನ್ನು ಕೊಡುಗೆಯಾಗಿ ನೀಡಿದರು. ಹೊಸ ಸಮವಸ್ತ್ರ ಧರಿಸಿದ ವಿದ್ಯಾರ್ಥಿಗಳು ಶಿಸ್ತಿನ ಸಿಪಾಯಿಗಳಂತೆ ಕಂಗೊಳಿಸಿದರು. ಪೋಷಕರ ಈ ಕಾರ್ಯಕ್ಕೆ ಶಾಲಾ ಸಿಬ್ಬಂದಿ ಹಾಗೂ ಗ್ರಾಮಸ್ಥರಿಂದ ಮೆಚ್ಚುಗೆ ವ್ಯಕ್ತವಾಯಿತು. ಶಾಲೆಯ ಮುಖ್ಯಶಿಕ್ಷಕರಾದ ಶ್ರೀ ಸಂಗಪ್ಪ ಬೆಲ್ಲದ ಅವರು ಕಾರ್ಯಕ್ರಮಕ್ಕೆ ಆಗಮಿಸಿದ ಗಣ್ಯರು, ಪೋಷಕರು ಹಾಗೂ ಶಿಕ್ಷಣ ಪ್ರೇಮಿಗಳಿಗೆ ಧನ್ಯವಾದಗಳನ್ನು ಸಲ್ಲಿಸಿದರು. ಶಿಕ್ಷಕರಾದ ಶ್ರೀ ಆನಂದ ಸೊಬಗಿನ ಅವರು ವಂದನಾರ್ಪಣೆ ನೆರವೇರಿಸಿದರು. ಈ ಸಂದರ್ಭದಲ್ಲಿ ಗ್ರಾಮದ ಪ್ರಮುಖರು, ಶಿಕ್ಷಣ ಪ್ರೇಮಿಗಳು, ವಿದ್ಯಾರ್ಥಿಗಳ ಪೋಷಕರು ಹಾಗೂ ಶಾಲಾ ಸಿಬ್ಬಂದಿ ಉಪಸ್ಥಿತರಿದ್ದರು.




# ವಿಶ್ವೇಶ್ವರಯ್ಯರ ಆದರ್ಶವೇ ಕೌಶಲ್ಯವಂತ ಯುವಕರಿಗೆ ದಾರಿದೀಪ

**ಸತ್ಯಮಿಥ್ಯ ಸುದ್ದಿಮೂಲ ನರೇಗಲ್ಲ :** ಸರ್ ಎಂ. ವಿಶ್ವೇಶ್ವರಯ್ಯ ಅವರ ದಿನಾಚರಣೆಯನ್ನು ಇಲ್ಲಿನ ಶ್ರೀ ಕೊಟ್ಟೂರುಸ್ವಾಮಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಭಕ್ತಿಭಾವ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಸಂಸ್ಥೆಯ ಪ್ರಥಮ ವರ್ಷದ ತರಬೇತಿದಾರರ ಸ್ವಾಗತ ಸಮಾರಂಭವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಕಿರಿಯ ತರಬೇತಿ ಅಧಿಕಾರಿ ಶ್ರೀಧರ ಕಮ್ಮಾರ ಮಾತನಾಡಿ ಸರ್ ಎಂ. ವಿಶ್ವೇಶ್ವರಯ್ಯ ಅವರ ಜೀವನ, ಸಾಧನೆ ಹಾಗೂ ದೇಶದ ಅಭಿವೃದ್ಧಿಗೆ ಅವರು ನೀಡಿದ ಮಹತ್ವದ ಕೊಡುಗೆಗಳ ಕುರಿತು ತರಬೇತಿದಾರರಿಗೆ ವಿವರಿಸಿದರು. ವಿಶ್ವೇಶ್ವರಯ್ಯ ಅವರ ಶಿಸ್ತು, ಸಮಯಪಾಲನೆ, ಪ್ರಾಮಾಣಿಕತೆ, ಕರ್ತವ್ಯನಿಷ್ಠೆ ಹಾಗೂ ದೂರದೃಷ್ಟಿಯಂತಹ ಮೌಲ್ಯಗಳನ್ನು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಸಂಸ್ಥೆಯ ಪ್ರಾಚಾರ್ಯ ಬಸವರಾಜ ಜೋಳದ ಮಾತನಾಡಿ, ಲಿಂ. ಡಾ. ಅಭಿನವ ಅನ್ನದಾನ ಮಹಾಸ್ವಾಮಿಗಳ ಕನಸಿನ ಕೂಸಾಗಿರುವ ಈ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಪ್ರವೇಶ ಪಡೆದಿರುವ ತರಬೇತಿದಾರರು ಗುಣಮಟ್ಟದ ತರಬೇತಿಯೊಂದಿಗೆ ಸೂಕ್ತ ವೃತ್ತಿ ಮಾರ್ಗದರ್ಶನ ಹಾಗೂ ಕೌಶಲ್ಯವನ್ನು ಪಡೆದು-ಕೊಂಡು ಉತ್ತಮ ಜೀವನ ರೂಪಿಸಿಕೊಳ್ಳಬೇಕು. ತಾವು ಕಲಿತ ಕೌಶಲ್ಯವನ್ನು ವೃತ್ತಿಜೀವನದಲ್ಲಿ ಸಮರ್ಪಕವಾಗಿ ಬಳಸಿಕೊಂಡು ಸಂಸ್ಥೆ ಹಾಗೂ ಪಾಲಕರಿಗೆ ಕೀರ್ತಿ ತರಬೇಕು ಎಂದು ಸಲಹೆ ನೀಡಿದರು.



ಕೈಗಾರಿಕಾ ತರಬೇತಿ ಸಂಸ್ಥೆಯ ಸಿಬ್ಬಂದಿ ನಾಗರಾಜ ಗುಡದಾರಿ ಅವರು ತರಬೇತಿದಾರರನ್ನು ಉದ್ದೇಶಿಸಿ ಮಾತನಾಡಿ, ವೃತ್ತಿಪರ ಶಿಕ್ಷಣದ ಮಹತ್ವ ಹಾಗೂ ತರಬೇತಿಯ ಅವಧಿಯಲ್ಲಿ ಶಿಸ್ತು, ಆಸಕ್ತಿ ಮತ್ತು ಪರಿಶ್ರಮದಿಂದ ಕಲಿಯಬೇಕಾದ ಅಗತ್ಯವನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ಡಿ.ಎ. ಪಾಟೀಲ, ಇಮಾಂಬಿ ಅತ್ತಾರ ಸೇರಿದಂತೆ ಸಂಸ್ಥೆಯ ಸಿಬ್ಬಂದಿ ಉಪಸ್ಥಿತರಿದ್ದರು.

ಶ್ರೀಧರ ಕಮ್ಮಾರ ಕಾರ್ಯಕ್ರಮ ನಿರೂಪಿಸಿದರು. ನಾಗರಾಜ ಗುಡದಾರಿ ವಂದಿಸಿದರು.

# ಸಂಭ್ರಮದಿಂದ ಜರುಗಿದ ವಿಶ್ವಕರ್ಮ ಜಯಂತಿ

**ಸತ್ಯಮಿಥ್ಯ ಸುದ್ದಿಮೂಲ ಬೆಟಗೇರಿ:** ಗೋಕಾಕ ತಾಲೂಕಿನ ಬೆಟಗೇರಿ ಗ್ರಾಮದ ವಿಶ್ವಕರ್ಮ ಸಮುದಾಯದ ವತಿಯಿಂದ ಸ್ಥಳೀಯ ಗ್ರಾಮ ದೇವತೆ ದ್ಯಾಮವ್ವದೇವಿ ದೇವಾಲಯ ಆವರಣದಲ್ಲಿ ಸೆ.17ರಂದು ನಡೆದ ವಿಶ್ವಕರ್ಮ ಜಯಂತಿ ಆಚರಣೆ ಕಾರ್ಯಕ್ರಮ ನಡೆಯಿತು.

ಸ್ಥಳೀಯ ವಿಶ್ವಕರ್ಮ ಸಮುದಾಯದ ಯುವ ಮುಖಂಡ ಶಿವರಾಜ ಪತ್ತಾರ ಅಧ್ಯಕ್ಷತೆ ವಹಿಸಿದ್ದರು. ಬಸಯ್ಯ ಹಿರೇಮಠ ಅವರು ವಿಶ್ವಕರ್ಮರ ಭಾವ ಚಿತ್ರಕ್ಕೆ ಪೂಜೆ, ಪುಷ್ಪ ಸಮರ್ಪನೆ ನೆರವೇರಿಸಿದ ಬಳಿಕ ಶ್ರೀ ಕಾಳಿಕಾ ಸ್ವಾ ಮಿಲ್ ಮಾಲೀಕ ಬಸಪ್ಪ ಬಡಿಗೇರ ಅವರಿಂದ ಸಿಹಿ ಮತ್ತು ಮಹಾಪ್ರಸಾದ ಸೇವೆ ನಡೆಯಿತು.

ಬೆಟಗೇರಿ ಗ್ರಾಪಂ ಮಾಜಿ ಅಧ್ಯಕ್ಷರಾದ ಬಸವಂತ ಕೋಣಿ, ಲಕ್ಷ್ಮಣ ಚಂದರಗಿ, ಲಕ್ಷ್ಮಣ ನೀಲಣ್ಣವರ, ಶ್ರೀಶೈಲ ಗಾಣಗಿ, ಈರಣ್ಣ ಬಳಿಗಾರ, ಲಖನ ಚಂದರಗಿ, ಲಕ್ಷ್ಮಣ ಸೋಮಗೌಡ್ರ, ರಾಮಣ್ಣ ಮುಧೋಳ, ಸತ್ತೆಪ್ಪ ಹೊರಟ್ಟಿ, ಪ್ರಕಾಶ ಗುಡದಾರ, ಸುರೇಶ ಬಡಿಗೇರ, ಸಂತೋಷ ಬಡಿಗೇರ, ವಿಠ್ಠಲ ಬಡಿಗೇರ, ಭೀಮಶೆಪ್ಪ ಬಡಿಗೇರ, ಮಾರುತಿ ಬಡಿಗೇರ, ಪ್ರಕಾಶ ಬಡಿಗೇರ, ಮಾಂತು ಬಡಿಗೇರ, ಬಸವರಾಜ ಬಡಿಗೇರ, ಮಂಜು ಪತ್ತಾರ, ಸೇರಿದಂತೆ ವಿಶ್ವಕರ್ಮ ಸಮುದಾಯದ ಹಿರಿಯ ನಾಗರಿಕರು, ಯುವಕರು, ಗ್ರಾಮಸ್ಥರು ಇದ್ದರು.

**ರಸಪ್ರಶ್ನೆ ಸ್ಪರ್ಧಾತ್ಮಕ ಪರೀಕ್ಷೆ:** ಗೋಕಾಕ ತಾಲೂಕಿನ ಬೆಟಗೇರಿ ಶ್ರೀ ವಿನಾಯಕ ಮಿತ್ರ ಮಂಡಳಿ ಇವರ ಆಶ್ರಯದಲ್ಲಿ ಗಣೇಶ ಹಬ್ಬದ ಪ್ರಯುಕ್ತ ಶನಿವಾರ ಸೆ.19 ರಂದು ಮಧ್ಯಾಹ್ನ 1 ಗಂಟೆಗೆ ಬೆಟಗೇರಿ ಗ್ರಾಮದೇವಿ ದ್ಯಾಮವ್ವದೇವಿ ದೇವಸ್ಥಾನ ಆವರಣದಲ್ಲಿ ರಸಪ್ರಶ್ನೆ ಸ್ಪರ್ಧಾತ್ಮಕ ಪರೀಕ್ಷೆ ಆಯೋಜಿಸಿದ್ದಾರೆ. ಈ ಪರೀಕ್ಷೆಯಲ್ಲಿ 6ರಿಂದ 10ನೇ ತರಗತಿವರೆಗಿನ ಶಾಲಾ ಮಕ್ಕಳು ಭಾಗವಹಿಸಬಹುದು. ಈ ರಸಪ್ರಶ್ನೆಯ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ವಿಜೇತರಾದವರಿಗೆ ಸ್ಥಳೀಯ ಕೆನರಾ ಬ್ಯಾಂಕ್ ವತಿಯಿಂದ ನೆನಪಿನ ಕಾಣಿಕೆ, ಹಲವು ಜನರು ಆಕರ್ಷಕ ನಗದು ಬಹುಮಾನ ನೀಡಲಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ 9538095703, 8088446736, 7411162085 ಈ ಮೊಬೈಲ್ ನಂಬರಗಳಿಗೆ ಸಂಪರ್ಕಿಸಬೇಕೆಂದು ಪರೀಕ್ಷೆ ಆಯೋಜಕ ಸಮಿತಿ ಪ್ರಕಟನೆಯಲ್ಲಿ ತಿಳಿಸಿದೆ.




# ಸಿದ್ದಾಪೂರದಲ್ಲಿ ಉದ್ಯೋಗ ಮಾಹಿತಿ ಕಾರ್ಯಾಗಾರ, ರಕ್ತದಾನ ಶಿಬಿರ 19ರಂದು

**ಸವಣೂರ:** ತಾಲ್ಲೂಕಿನ ಸಿದ್ದಾಪೂರ ಗ್ರಾಮದ ಶ್ರೀ ಬನಶಂಕರಿ ದೇವಸ್ಥಾನ ಸಮುದಾಯ ಭವನದಲ್ಲಿ ಅಜ್ಜಿ ಆಸರೇ ಸೇವಾ ಸಂಸ್ಥೆ(ರಿ) ಸಿದ್ದಾಪುರ ವತಿಯಿಂದ ದಿ,19 ಶನಿವಾರ ಬೆಳಿಗ್ಗೆ 10 ಘಂಟೆಗೆ ಉದ್ಯೋಗ ಮಾಹಿತಿ ಕಾರ್ಯಾಗಾರ ಹಾಗೂ ರಕ್ತದಾನ ಶಿಬಿರ ಜರುಗಲಿದೆ. ಹೂವಿನಶಿಗ್ಲಿಯ ವಿರಕ್ತಮಠದ ಶ್ರೀ ಮ.ನಿ.ಪ್ರ.ಚನ್ನವೀರ ಮಹಾಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸುವರು.

ಸವಣೂರ ಪೋಲಿಸ್ ಆರಕ್ಷಕ ನಿರೀಕ್ಷಕರಾದ ತಿಮ್ಮಣ್ಣ ಚಾಮನೂರ ಅವರು ಕಾರ್ಯಕ್ರಮ ಉದ್ಘಾಟನೆ ಮಾಡುವರು. ಫೆವಾರ್ಡ್- ಕೆ ಜಿಲ್ಲಾ ಘಟಕದ ಅಧ್ಯಕ್ಷರಾದ ಏಕನಾಥ ಮುದಿಗೌಡರ ಹಾಗೂ ಕರ್ನಾಟಕ ರಾಜ್ಯ ರೈತೋದಯ ಹಸಿರು ಸೇನೆ ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ಚಂದ್ರಶೇಖರ ಬಿ ಟಿ ಅವರು ಜ್ಯೋತಿ ಬೆಳುಗುವವರು. ಅಜ್ಜಿ ಆಸರೇ ಸೇವಾ ಸಂಸ್ಥೆ(ರಿ) ಅಧ್ಯಕ್ಷರಾದ ಯಲ್ಲಪ್ಪ ಮಡಿವಾಳರ ಅಧ್ಯಕ್ಷತೆ ವಹಿಸುವರು. ಫೆವಾರ್ಡ್ ಕೆ ರಾಜ್ಯ ಉಪಾಧ್ಯಕ್ಷರಾದ ಹೆಚ್ ಎಫ್ ಅಕ್ಕಿ, ವಿಶ್ವಾಸ ಯುವ ಸಂಘ(ರಿ)ದ ಅಧ್ಯಕ್ಷರಾದ ಚಂದ್ರಶೇಖರಾಚಾರ್ಯ ಬಡಿಗೇರ, ವಕೀಲರು ಹಾಗೂ ಪತ್ರಕರ್ತರಾದ ಸತೀಶ ಗೌಳಿ, ವಿಜಯವಾಣಿ ವರದಿಗಾರರಾದ ಆನಂದ ಮತ್ತಿಕಟ್ಟಿ, ಪ್ರಜಾವಾಣಿ ವರದಿಗಾರರಾದ ಯೋಗೇಂದ್ರ ಜಂಬಗಿ, ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರಾದ ಎಸ್ ಎಸ್ ಮರಿಗೌಡ್ರ, ಹಿರಿಯ ತಜ್ಞವೈದ್ಯರಾದ ಡಾ.ಬಸವರಾಜ ತಳವಾರ, ತಾಲ್ಲೂಕ ಆರೋಗ್ಯ ಅಧಿಕಾರಿಗಳಾದ ಡಾ.ಚಂದ್ರಕಲಾ ಜೆ, ಹಿರೇಮುಗದೂರ ಅಮ್ಮಾ ಸಂಸ್ಥೆ(ರಿ) ಯ ಸಂಸ್ಥಾಪಕರಾದ ನಿಂಗಪ್ಪ ಆರೇರ, ಸಮಾಜ ಸೇವಕರಾದ ಷರೀಫಸಾಬ ನದಾಫ ಸೇರಿದಂತೆ ಅನೇಕ ಗಣ್ಯರು, ವಿವಿಧ ಕಂಪನಿಯ ಮುಖ್ಯಸ್ಥರು, ಊರಿನ ಗುರು ಹಿರಿಯರು-ಕಿರಿಯರು ಹಾಗೂ ಸಾರ್ವಜನಿಕರು ಭಾಗವಹಿಸುವರು ಎಂದು ಅಜ್ಜಿ ಆಸರೇ ಸೇವಾ ಸಂಸ್ಥೆಯ ಅಧ್ಯಕ್ಷರಾದ ಯಲ್ಲಪ್ಪ ಮಡಿವಾಳರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಒಟ್ಟಾಗಿ ಶ್ರಮಿಸೋಣ: ಡಾ. ಸುರೇಶ ಇಟ್ನಾಳ

**ಕೊಪ್ಪಳ :** ಜಿಲ್ಲೆಯ ತಲಾ ಆದಾಯ ಹೆಚ್ಚಳ ಹಾಗೂ ಸರ್ವತೋಮುಖ ಅಭಿವೃದ್ಧಿಗೆ ಕ್ರಿಯಾಯೋಜನೆ ರೂಪಿಸಿ, ಅದರ ಅನುಷ್ಠಾನಕ್ಕೆ ನಾವೆಲ್ಲರೂ ಒಟ್ಟಾಗಿ ಶ್ರಮಿಸೋಣ ಎಂದು ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ ಅವರು ಅಧಿಕಾರಿಗಳಿಗೆ ಕರೆ ನೀಡಿದರು.

79ನೇ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ ನಿಮಿತ್ತ ಸೆಪ್ಟೆಂಬರ್ 17ರಂದು ಕೊಪ್ಪಳ ಜಿಲ್ಲಾಡಳಿತ ಭವನದ ಆವರಣದಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ನಮ್ಮ ದೇಶಕ್ಕೆ 1947ರ ಆಗಸ್ಟ್ 15ರಂದು ಸ್ವಾತಂತ್ರ ಸಿಕ್ಕರೂ, ಅಂದಿನ ನಿಜಾಮರ ಆಡಳಿತದಲ್ಲಿದ್ದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ-ವಿಜಯನಗರ ಭಾಗಗಳಿಗೆ ಸ್ವಾತಂತ್ರ ಲಭಿಸಿರಲಿಲ್ಲ. ಸ್ವಾಮಿ ರಮಾನಂದ ತೀರ್ಥರ ನೇತೃತ್ವದಲ್ಲಿ ಜಿ.ಕೆ. ಪ್ರಾಣೇಶಾಚಾರ್, ಬಂಗಾರ ಶೆಟ್ಟಿ, ಹಕೀಕತ್ ರಾವ್, ರಾಮಚಂದ್ರಪ್ಪ, ಎಸ್.ಪಿ. ಅವಧಾನಿ, ವಿಶ್ವನಾಥರೆಡ್ಡಿ ಮುದ್ನಾಳ್, ಪೋಲೂರು ಮಲ್ಲಪ್ಪ, ಚಂದ್ರಶೇಖರ ಪಾಟೀಲ್, ಶಿವಮೂರ್ತಿ ಸ್ವಾಮಿ ಅಳವಂಡಿ, ಚಟ್ನಳ್ಳಿ ವೀರಣ್ಣ ಸೇರಿದಂತೆ ಕೊಪ್ಪಳ, ಗಂಗಾವತಿ, ಕುಷ್ಟಗಿ, ಯಲಬುರ್ಗಾ ಭಾಗದ ಅನೇಕ ಮಹನೀಯರು ಹೋರಾಟ ನಡೆಸಿದರು. ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ನೇತೃತ್ವದಲ್ಲಿ ನಡೆದ 'ಆಪರೇಷನ್ ಪೋಲೋ' ಸೈನಿಕ ಕಾರ್ಯಾಚರಣೆಯ ಫಲವಾಗಿ 1948ರ ಸೆಪ್ಟೆಂಬರ್ 17ರಂದು ಈ ಭಾಗ ವಿಮೋಚನೆಗೊಂಡಿತು. ಇದಕ್ಕಾಗಿ ಶ್ರಮಿಸಿದ ಎಲ್ಲಾ ಮಹನೀಯರ ಹೆಸರುಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ ಎಂದರು.

ಮೈಸೂರು ಪ್ರಾಂತ್ಯಕ್ಕೆ ಹೋಲಿಸಿದರೆ ಕಲ್ಯಾಣ ಕರ್ನಾಟಕ ಭಾಗ ಅಭಿವೃದ್ಧಿಯಲ್ಲಿ ಹಿಂದುಳಿದಿದೆ. 371(ಜೆ) ತಿದ್ದುಪಡಿ ಹಾಗೂ ಕೆಕೆಆರ್‌ಡಿಬಿ ಮೂಲಕ ಯೋಜನೆಗಳು ಜಾರಿಯಾಗುತ್ತಿದ್ದರೂ, ಕೊಪ್ಪಳ ಜಿಲ್ಲೆಯ ಪ್ರಸ್ತುತ ತಲಾ ಆದಾಯ 1,81,000 ರೂ.ಗಳಷ್ಟಿದ್ದು, ಕಲ್ಯಾಣ ಕರ್ನಾಟಕದ ರಾಯಚೂರು, ಯಾದಗಿರಿ, ಕಲಬುರಗಿ ಜಿಲ್ಲೆಗಳಿಗಿಂತ ಮುಂದಿದ್ದರೂ




ಬಳ್ಳಾರಿ, ವಿಜಯನಗರ ಮತ್ತು ಬೀದರ್ ಜಿಲ್ಲೆಗಳಿಗಿಂತ ಹಿಂದುಳಿದಿದೆ. ಹಾಗಾಗಿ ಜಿಲ್ಲೆಯ ಆರ್ಥಿಕತೆ ಬಲಪಡಿಸಲು, ತಲಾ ಆದಾಯವನ್ನು ಹೆಚ್ಚಿಸುವುದರ ಜೊತೆಗೆ ಉದ್ಯೋಗ ಸೃಷ್ಟಿಗೆ ಪೂರಕವಾಗಿ ಅಧಿಕಾರಿಗಳು ಸಮಗ್ರ ಕ್ರಿಯಾಯೋಜನೆಗಳನ್ನು ರೂಪಿಸಿ, ಅನುಷ್ಠಾನಗೊಳಿಸಬೇಕು ಎಂದು ಹೇಳಿದರು.

ಶಿಕ್ಷಣ, ಆರೋಗ್ಯ, ಉದ್ಯೋಗ ಮತ್ತು ಇತರೆ ಕ್ಷೇತ್ರಗಳಿಗೆ ಮುಖ್ಯ ಒತ್ತು ನೀಡಬೇಕಿದ್ದು, ಸೇವಾ ವಲಯ ಹಾಗೂ ಉತ್ಪಾದನಾ ಕೈಗಾರಿಕೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಆಕರ್ಷಿಸಿ ಉದ್ಯೋಗಾವಕಾಶ ಹೆಚ್ಚಿಸಬೇಕು. ಜಿಲ್ಲೆಯ ಜಿಡಿಪಿಗೆ ಕೃಷಿ ಕ್ಷೇತ್ರದಿಂದ ಶೇ. 31 ರಷ್ಟು ಪಾಲು ಬರುತ್ತಿದ್ದು, ಕಟಾವಿನ ನಂತರದ ನಷ್ಟ ತಡೆಯಲು ಸೂಕ್ತ ಶೇಖರಣಾ ಘಟಕಗಳನ್ನು ಸ್ಥಾಪಿಸುವುದು ಹಾಗೂ ಮೌಲ್ಯವರ್ಧನೆ ಮಾಡುವುದು ಅತ್ಯವಶ್ಯಕವಾಗಿದೆ ಎಂದರು. ಇದಲ್ಲದೆ ಜಿಲ್ಲೆಯು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ 25ನೇ ಸ್ಥಾನದಲ್ಲಿದ್ದು, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಗಮನಾರ್ಹ ಸುಧಾರಣೆ ತರುವುದರೊಂದಿಗೆ ಕೆಕೆಆರ್‌ಡಿಬಿ ಕಾರ್ಯದರ್ಶಿಗಳು ನೀಡಿರುವ ಬೆಳವಣಿಗೆಯ ಗುರಿಯನ್ನು ತಲುಪಲು ಅಧಿಕಾರಿಗಳು ಮತ್ತು ಸಿಬ್ಬಂದಿ ಬದ್ಧತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ವರ್ಣಿತ್ ನೇಗಿ, ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ, ಜಿ.ಪಂ ಉಪ ಕಾರ್ಯದರ್ಶಿಗಳಾದ ಟಿ.ಕೃಷ್ಣಮೂರ್ತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ. ಈಶ್ವರ ಸವಡಿ, ಶಾಲಾ ಶಿಕ್ಷಣ ಇಲಾಖೆ ಹಾಗೂ ಡಯಟ್ ಉಪನಿರ್ದೇಶಕರಾದ ಅನಂತಕುಮಾರ ಎ.ಎಸ್., ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಚಾರ್ಯರಾದ ಕೃಷ್ಣಮೂರ್ತಿ ದೇಸಾಯಿ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ರೋಣ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರತಿಷ್ಠಾಪನೆಗೊಂಡ ವಿಘ್ನ ವಿನಾಶಕ.

# ಪೂಜೆ ಯಾಂತ್ರಿಕವಾಗದೆ, ಆಂತರಿಕ ಭಕ್ತಿಯಿಂದ ಕೂಡಿರಲಿ: ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ

## ಕೋಡಿಕೊಪ್ಪದ ಅನ್ನದಾನೇಶ್ವರ ಕಾಲೊನಿಯಲ್ಲಿ ಪ್ರಥಮ ವರ್ಷದ ಗಣೇಶೋತ್ಸವ; ಯುವಕರಿಗೆ ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಿ ಬೆಳೆಸಿಕೊಳ್ಳಲು ಕರೆ

**ಸತ್ಯಮಿಥ್ಯ ಸುದ್ದಿಮೂಲ ನರೇಗಲ್ಲ :**
ಭಾರತೀಯ ಸಂಸ್ಕೃತಿಯಲ್ಲಿ ಹಬ್ಬಗಳಿಗೆ ವಿಶೇಷ ಮಹತ್ವವಿದ್ದು, ಪ್ರತಿಯೊಂದು ಧಾರ್ಮಿಕ ಆಚರಣೆಯ ಹಿಂದೆ ವೈಜ್ಞಾನಿಕ ಹಿನ್ನೆಲೆಯೂ ಅಡಗಿದೆ. ಹೀಗಾಗಿ ಪೂಜಾ ವಿಧಿವಿಧಾನಗಳ ಅರ್ಥ ಹಾಗೂ ಮಹತ್ವವನ್ನು ಅರಿತು ಭಕ್ತಿಯಿಂದ ಆಚರಿಸಬೇಕು. ಪೂಜೆ ಕೇವಲ ಯಾಂತ್ರಿಕವಾಗದೆ, ಆಂತರಿಕ ಭಕ್ತಿಯಿಂದ ಕೂಡಿರಬೇಕು ಎಂದು ಹಿರೇಮಠದ ಷ.ಬ್ರ. ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಮಜರೆ ಕೋಡಿಕೊಪ್ಪದ ಅನ್ನದಾನೇಶ್ವರ ಕಾಲೊನಿಯಲ್ಲಿ ಪ್ರಥಮ ವರ್ಷದ ಗಣೇಶೋತ್ಸವದ ಅಂಗವಾಗಿ ಬುಧವಾರ ಆಯೋಜಿಸಿದ್ದ ವಿವಿಧ ಮನರಂಜನಾ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಧಾರ್ಮಿಕ ಕಾರ್ಯಗಳಲ್ಲಿ ಯುವಕರು ಹೆಚ್ಚಿನ ಆಸಕ್ತಿ ವಹಿಸಬೇಕು. ಯುವಶಕ್ತಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಾಗ ಸಂಸ್ಕಾರ, ಶಿಸ್ತು ಮತ್ತು ಸಾಮಾಜಿಕ ಒಗ್ಗಟ್ಟು ಬಲಗೊಳ್ಳುತ್ತದೆ. ಭಾರತೀಯ ಪರಂಪರೆಯ ಹಬ್ಬಗಳು ಕೇವಲ ಆಚರಣೆಗಳಿಗೆ ಸೀಮಿತವಾಗಿರದೆ, ಜೀವನ ಮೌಲ್ಯಗಳನ್ನು ಸಾರುತ್ತವೆ ಎಂದರು.

ನಾವು ಮಾಡುವ ಪೂಜೆಯ ಬಗ್ಗೆ ಜ್ಞಾನ ಮತ್ತು ಅರಿವು ಹೊಂದಿರಬೇಕು. ಆಚರಣೆಯ ಹಿಂದಿರುವ ಆಶಯವನ್ನು ತಿಳಿದುಕೊಂಡು ಪೂಜೆ–ಪುನಸ್ಕಾರಗಳನ್ನು ನೆರವೇರಿಸಿದಾಗ ಅದರ ಸಾರ್ಥಕತೆ ಹೆಚ್ಚುತ್ತದೆ. ಕೇವಲ ಸಂಪ್ರದಾಯದಂತೆ ಪೂಜೆ ಮಾಡುವುದಕ್ಕಿಂತ, ಅದರ ಅರ್ಥವನ್ನು ಅರಿತು ಮನಸ್ಸಿನಿಂದ ಭಕ್ತಿಯನ್ನು ಅರ್ಪಿಸಬೇಕು. ಪೂಜೆ ಹೊರಗಿನ ಪ್ರದರ್ಶನವಾಗದೆ ಅಂತರಂಗದ ಶುದ್ಧೀಕರಣಕ್ಕೆ ದಾರಿಯಾಗಬೇಕು ಎಂದು ಸ್ವಾಮೀಜಿ ತಿಳಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಎಂ.ವಿ. ವೀರಾಪುರ, ಕಾಲೊನಿಯ



ಯುವಕರು ಒಗ್ಗಟ್ಟಿನಿಂದ ಶ್ರಮಿಸಿ ಮುಳ್ಳು–ಕೊಂಪೆಯಾಗಿದ್ದ ಪಟ್ಟಣ ಪಂಚಾಯಿತಿ ಸ್ಥಳವನ್ನು ಸ್ವಚ್ಛಗೊಳಿಸಿ ಉತ್ತಮ ವಾತಾವರಣ ನಿರ್ಮಿಸಿ ಪ್ರಥಮ ಬಾರಿಗೆ ಗಣೇಶೋತ್ಸವ ಆಯೋಜಿಸಿರುವುದು ಶ್ಲಾಘನೀಯ. ಹಿರಿಯರ ಮಾರ್ಗದರ್ಶನ ಹಾಗೂ ಯುವಕರ ಪರಿಶ್ರಮದಿಂದ ಕಾರ್ಯಕ್ರಮ ಯಶಸ್ವಿಯಾಗಿದೆ. ಯುವಕರು ಮನಸ್ಸು ಮಾಡಿದರೆ ಅಸಾಧ್ಯವಾದುದೇನೂ ಇಲ್ಲ ಎಂಬುದನ್ನು ಮಿತ್ರ ಮಂಡಳಿ ತೋರಿಸಿಕೊಟ್ಟಿದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಹಿರಿಯ ಸಾಹಿತಿ ಹಾಗೂ ನಿವೃತ್ತ ಮುಖ್ಯ ಶಿಕ್ಷಕ ಎಂ.ಎ. ಹಿರೇವಡೆಯರ್, ಗಣಪತಿ ಸದ್ಗುಣಗಳ ಸಂಕೇತವಾಗಿದ್ದು, ಮನುಷ್ಯನ ಜೀವನದಲ್ಲಿ ಸದ್ಗುಣಗಳೇ ನಿಜವಾದ ಸಂಪತ್ತು. ಇತರರಲ್ಲಿರುವ ದುರ್ಗುಣಗಳನ್ನು ಹುಡುಕುವ ಬದಲು ಸದ್ಗುಣಗಳನ್ನು ಗುರುತಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ಕುಟುಂಬದಲ್ಲಿ ಹಿರಿಯರನ್ನು ಗೌರವಿಸುವ ಸಂಸ್ಕಾರ ಬೆಳೆಸಿಕೊಳ್ಳಬೇಕು. ಪ್ರೀತಿ, ವಿಶ್ವಾಸ, ಆತ್ಮೀಯತೆ ಹಾಗೂ ಪರಸ್ಪರ ಗೌರವದಿಂದ ಬದುಕಬೇಕು. ಗಣೇಶನಿಗೆ ಸಂಬಂಧಿಸಿದ ಸಿದ್ಧಿ‌ಬುದ್ಧಿ ಸಂಕೇತಗಳು ಜ್ಞಾನ, ಬುದ್ಧಿವಂತಿಕೆ ಹಾಗೂ ಸಾಧನೆಯ ಮಹತ್ವವನ್ನು ಸಾರುತ್ತವೆ. ಗಣೇಶನ ಕುರಿತ ಪೌರಾಣಿಕ ಪ್ರಸಂಗಗಳಲ್ಲಿ ಜೀವನ ಮೌಲ್ಯಗಳು, ನೈತಿಕ ಸಂದೇಶಗಳು ಹಾಗೂ ಮಾನವೀಯ ಗುಣಗಳ ಪಾಠಗಳಿವೆ ಎಂದು ವಿವರಿಸಿದರು.

ಪ್ರಾಚಾರ್ಯ ಡಾ. ಕಲ್ಲಯ್ಯ ಹಿರೇಮಠ, ಎಸ್.ಎ. ಪಾಟೀಲ, ಜಿ.ಎಂ. ತಿಪಶೆಟ್ಟಿ, ಎ.ಬಿ. ಹಿರೇಮಠ, ಅರುಣ ಕುಲಕರ್ಣಿ ಸೇರಿದಂತೆ ಹಲವರು ಅತಿಥಿಗಳಾಗಿ ಉಪಸ್ಥಿತರಿದ್ದರು. ಗೀತಾ ಭೋಪಳಾಪೂರ ಪ್ರಾರ್ಥಿಸಿದರು. ಪ್ರಶಾಂತ ಅಂಗಡಿ ಸ್ವಾಗತಿಸಿದರು. ಬಳಿಕ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಹಾಗೂ ಮನರಂಜನಾ ಕಾರ್ಯಕ್ರಮಗಳು ಜರುಗಿದವು.

# ತಾಯಿ–ಮಗುವಿನ ಆರೋಗ್ಯಕ್ಕೆ ಪೋಷಕಾಂಶಯುಕ್ತ ಆಹಾರ ಅತ್ಯಗತ್ಯವಾಗಿದೆ: ಸಿಡಿಪಿಓ ಲಲಿತಾ ಅಳವಂಡಿ

**ಸತ್ಯಮಿಥ್ಯ ಸುದ್ದಿಮೂಲ ನರೇಗಲ್ಲ:**
ಸಮತೋಲನ ಹಾಗೂ ಗುಣಮಟ್ಟದ ಪೌಷ್ಟಿಕ ಆಹಾರ ಸೇವಿಸುವ ಮೂಲಕ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು ಎಂದು ರೋಣ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಲಲಿತಾ ಅಳವಂಡಿ ಹೇಳಿದರು.

ಸಮೀಪದ ಜಕ್ಕಲಿ ಗ್ರಾಮದ ಅಂಗನವಾಡಿ ಕೇಂದ್ರ ಸಂಖ್ಯೆ 283ರಲ್ಲಿ ಬುಧವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಪೋಷಣ್ ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಗುವಿನ ಜೀವನದ ಮೊದಲ ಸಾವಿರ ದಿನಗಳು ಅತ್ಯಂತ ಮಹತ್ವದ್ದಾಗಿವೆ. ಈ ಅವಧಿಯಲ್ಲಿ ತಾಯಿ ಮತ್ತು ಮಗುವಿಗೆ ಅಗತ್ಯವಾದ ಪೌಷ್ಟಿಕ ಆಹಾರ ದೊರೆಯುವಂತೆ ಕುಟುಂಬದವರು ಕಾಳಜಿ ವಹಿಸಬೇಕು. ಮಕ್ಕಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಸಮತೋಲನ ಆಹಾರ ಅತ್ಯಗತ್ಯವಾಗಿದ್ದು, ಪ್ರತಿಯೊಬ್ಬರೂ ತಮ್ಮ ದೈನಂದಿನ ಆಹಾರದಲ್ಲಿ ಪೌಷ್ಟಿಕಾಂಶಯುಕ್ತ ಪದಾರ್ಥಗಳಿಗೆ ಆದ್ಯತೆ ನೀಡಬೇಕು ಎಂದರು.

ಪ್ರಾಥಮಿಕ ಸುರಕ್ಷಣಾಧಿಕಾರಿ ಸಾವಿತ್ರಿ ಹಿರೇವಡೆಯರ್ ಮಾತನಾಡಿ, ಗರ್ಭಿಣಿಯರು, ಬಾಣಂತಿಯರು ಹಾಗೂ ಬೆಳೆಯುತ್ತಿರುವ ಮಕ್ಕಳು ಪೌಷ್ಟಿಕಾಂಶಯುಕ್ತ ಆಹಾರ ಸೇವಿಸುವುದು ಅತ್ಯವಶ್ಯಕ. ತಾಯಿ ಮತ್ತು ಮಗುವಿನ ಆರೋಗ್ಯದ ಬಗ್ಗೆ ಕುಟುಂಬದವರು ವಿಶೇಷ ಕಾಳಜಿ ವಹಿಸಬೇಕು. ರಕ್ತಹೀನತೆಯನ್ನು ನಿರ್ಲಕ್ಷಿಸದೆ ಹಸಿರು ಸೊಪ್ಪು, ತರಕಾರಿ ಸೇರಿದಂತೆ ಪೌಷ್ಟಿಕ ಆಹಾರವನ್ನು ನಿಯಮಿತವಾಗಿ ಸೇವಿಸುವಂತೆ ಸಲಹೆ ನೀಡಿದರು.

ಸಮುದಾಯ ಆರೋಗ್ಯ ಅಧಿಕಾರಿ ಸಂತೋಷ್ ರಾಠೋಡ ಅವರು ಪೋಷಣ್ ಅಭಿಯಾನದ ಮಹತ್ವ, ಆರೋಗ್ಯಕರ ಆಹಾರ ಪದ್ಧತಿ ಹಾಗೂ ಪೌಷ್ಟಿಕ ಆಹಾರದ ಅಗತ್ಯತೆ ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದ ಅಂಗವಾಗಿ ಗರ್ಭಿಣಿ ಮಹಿಳೆಯರಿಗೆ ಉಡಿ ತುಂಬುವ ಸೀಮಂತ ಕಾರ್ಯಕ್ರಮವನ್ನು ಸಾಂಪ್ರದಾಯಿಕವಾಗಿ ನೆರವೇರಿಸಲಾಯಿತು. ತಾಯಿ ಮತ್ತು ಮಗುವಿನ ಆರೋಗ್ಯ ಹಾಗೂ ಸುಖಕರ ಹೆರಿಗೆಗಾಗಿ ಶುಭ ಹಾರೈಸಲಾಯಿತು.

ಈ ಸಂದರ್ಭದಲ್ಲಿ ಆರು ತಿಂಗಳು ತುಂಬಿದ ಮಗುವಿಗೆ ಅನ್ನಪ್ರಾಶನ (ಅನ್ನ ಪ್ರಸನ್ನ) ಕಾರ್ಯಕ್ರಮ ನೆರವೇರಿಸಿ, ಮಗುವಿನ ಪೌಷ್ಟಿಕ ಆಹಾರ ಸೇವನೆಗೆ ಸಾಂಕೇತಿಕವಾಗಿ ಚಾಲನೆ ನೀಡಲಾಯಿತು. ಮಗುವಿಗೆ ಆರು ತಿಂಗಳ ನಂತರ ತಾಯಿಯ ಹಾಲಿನೊಂದಿಗೆ ವಯೋಮಾನಕ್ಕೆ ಅನುಗುಣವಾದ ಪೂರಕ ಆಹಾರ ನೀಡುವುದು, ಆಹಾರದ ಸ್ವಚ್ಛತೆ ಮತ್ತು ಪೌಷ್ಟಿಕಾಂಶದ ಬಗ್ಗೆ ಕುಟುಂಬದವರಿಗೆ ಮಾಹಿತಿ ನೀಡಲಾಯಿತು.

ಕಾರ್ಯಕ್ರಮವನ್ನು ಸಸಿಗೆ ನೀರು ಎರೆಯುವ ಮೂಲಕ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಅಂಗನವಾಡಿ ಮೇಲ್ವಿಚಾರಕಿ ಜಯಶ್ರೀ ಹೂಗಾರ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಬಿ.ಎನ್. ಬಚ್ಚನಹಳ್ಳಿ, ಬಾಲವಿಕಾಸ ಸಮಿತಿ ಅಧ್ಯಕ್ಷರು, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

ಅಂಗನವಾಡಿ ಕಾರ್ಯಕರ್ತೆಯರಾದ ಗಂಗಮ್ಮ ಪಾಟೀಲ ಸಂಗಡಿಗರು ಪ್ರಾರ್ಥಿಸಿದರು. ಅನ್ನಪೂರ್ಣ ಭಜಂತ್ರಿ ಸ್ವಾಗತಿಸಿದರು. ಗೀತಾ ಮೇಟಿ ನಿರೂಪಿಸಿದರು. ರೇಣುಕಾ ಪಾಟೀಲ ವಂದಿಸಿದರು.



# ಸತೀಶ ಜಾರಕಿಹೊಳಿ ನಿವಾಸದ ಮೇಲಿನ ದಾಳಿ ರಾಜಕೀಯ ಪ್ರೇರಿತ: ಆರೋಪ

**ಸತ್ಯಮಿಥ್ಯ ಸುದ್ದಿಮೂಲ ನರೇಗಲ್ಲ :**
ರಾಜ್ಯ ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಅವರ ನಿವಾಸದ ಮೇಲೆ ಜಾರಿ ನಿರ್ದೇಶನಾಲಯ (ಇಡಿ) ದಾಳಿ ನಡೆಸಿರುವುದು ಖಂಡನೀಯ ಎಂದು ನರೇಗಲ್ಲ ಬ್ಲಾಕ್ ಕಾಂಗ್ರೆಸ್ ಎಸ್‌ಟಿ ಘಟಕದ ಅಧ್ಯಕ್ಷ ಶೇಖಪ್ಪ ಜುಟ್ಲ ಆರೋಪಿಸಿದ್ದಾರೆ.



ಈ ಹಿಂದೆ ಮಾಜಿ ಸಚಿವ ನಾಗೇಂದ್ರ ಅವರ ನಿವಾಸದ ಮೇಲೆ ಇಡಿ ದಾಳಿ ನಡೆಸಿ, ಅವರ ರಾಜೀನಾಮೆಗೆ ಕಾರಣವಾಗಿದ್ದ ಇಡಿ, ಇದೀಗ ಸಚಿವ ಸತೀಶ ಜಾರಕಿಹೊಳಿ ಅವರ ನಿವಾಸದ ಮೇಲೂ ದಾಳಿ ನಡೆಸಿರುವುದನ್ನು ಗಮನಿಸಿದರೆ, ಇದು ರಾಜಕೀಯ ಪ್ರೇರಿತ ದಾಳಿ ಎಂಬ ಅನುಮಾನ ಮೂಡುತ್ತದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೇಂದ್ರ ಸರ್ಕಾರ ಇಂತಹ ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಂಡು ರಾಜಕೀಯ ಮಾಡುತ್ತಿದೆ ಎಂದು ಆರೋಪಿಸಿದ ಅವರು, ವಿರೋಧ ಪಕ್ಷಗಳ ಮುಖಂಡರನ್ನು ಗುರಿಯಾಗಿಸಿಕೊಂಡು ತನಿಖಾ ಸಂಸ್ಥೆಗಳನ್ನು ಬಳಸಿಕೊಳ್ಳುತ್ತಿರುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

# ಪಶ್ಚಿಮ ಪದವೀಧರ ಕ್ಷೇತ್ರ: ಕಾಂಗ್ರೆಸ್ ಚುನಾವಣಾ ಸಿದ್ಧತೆ ಚುರುಕು

**ಸತ್ಯಮಿಥ್ಯ ಸುದ್ದಿಮೂಲ ಗಜೇಂದ್ರಗಡ:**
ರೋಣ ಹಾಗೂ ನರೇಗಲ್ ಬ್ಲಾಕ್ ಕಾಂಗ್ರೆಸ್ ಸಮಿತಿಗಳ ವತಿಯಿಂದ ಪಶ್ಚಿಮ ಪದವೀಧರ ಕ್ಷೇತ್ರದ ಚುನಾವಣೆ, ಭಾರತ ಜೋಡೋ ಯುವಕರ ಸಂಘ ಸ್ಥಾಪನೆ ಹಾಗೂ ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ಕುರಿತು ಪರಿಶೀಲನಾ ಸಭೆ ಗುರುವಾರ ನಡೆಯಿತು.

ಸಭೆಯಲ್ಲಿ ಮಾತನಾಡಿದ ಸಂಗನಗೌಡ (ಮಿಥುನ) ಜಿ. ಪಾಟೀಲ, ಮುಂಬರುವ ಪಶ್ಚಿಮ ಪದವೀಧರ ಕ್ಷೇತ್ರದ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಪಕ್ಷದ ಸಂಘಟನೆಯನ್ನು ಮತ್ತಷ್ಟು ಬಲಪಡಿಸುವ ಅಗತ್ಯವಿದೆ. ಅರ್ಹ ಪದವೀಧರ ಮತದಾರರನ್ನು ಗುರುತಿಸಿ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಸೇರಿದಂತೆ ಅಗತ್ಯ ಪರಿಷ್ಕರಣೆ ಕಾರ್ಯವನ್ನು ಸಮರ್ಪಕವಾಗಿ ಕೈಗೊಳ್ಳಬೇಕು ಎಂದು ಹೇಳಿದರು. ಪಶ್ಚಿಮ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮೋಹನ ಲಿಂಬಿಕಾಯಿ ಮಾತನಾಡಿ, ಪದವೀಧರ ಮತದಾರರ ಸಮಸ್ಯೆಗಳು ಹಾಗೂ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದ ವಿಚಾರಗಳನ್ನು ಸಮರ್ಥವಾಗಿ ಪ್ರತಿನಿಧಿಸುವ ನಿಟ್ಟಿನಲ್ಲಿ ಸಂಘಟಿತವಾಗಿ ಕಾರ್ಯನಿರ್ವಹಿಸಬೇಕು. ಪಕ್ಷದ ಕಾರ್ಯಕರ್ತರು ಮತದಾರರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಮತದಾರರ ಪಟ್ಟಿಯ ಪರಿಷ್ಕರಣೆ ಕಾರ್ಯಕ್ಕೆ ಆದ್ಯತೆ ನೀಡಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ರೋಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವೀರಣ್ಣ ಶೆಟ್ಟರ, ಅಶೋಕ ಬಾಗಮಾರ, ಪ್ರಶಾಂತ್ ರಾಠೋಡ್, ಶಿವರಾಜ ಘೋರ್ಪಡೆ, ಸಿದ್ದಣ್ಣ ಬಂಡಿ, ಶ್ರೀಕಾಂತ ಅವಧೂತ, ಚಂಬಣ್ಣ ಚವಡಿ, ಮಾರುತಿ ಕಲ್ಲೋಡ್ಡರ, ಶ್ರೀಧರ ಬಿದರಳ್ಳಿ, ಆರ್.ಎಂ. ರಾಯಬಾಗಿ, ಎ.ಡಿ. ಕೋಲಕಾರ, ಮುರ್ತುಜಾ ಡಾಲಾಯತ, ಸುರೇಂದ್ರಸಾ ರಾಯಬಾಗಿ, ಶೇಖಪ್ಪ ರಾಮಜಿ, ಯಲ್ಲಪ್ಪ ಬಂಕದ, ವೆಂಕಟೇಶ ಮುದಗಲ್, ಮಂಜುಳಾ ರೇವಡಿ, ಶಾರದಾ ರಾಠೋಡ, ಶಶಿಧರ ಹೂಗಾರ, ರೇಣಪ್ಪ ಇಂಗಳೆ, ಅಜಿತ ವಂದಕುದರಿ, ಅಪ್ಪು ಮತ್ತಿಕಟ್ಟಿ, ಅರ್ಜುನ ರಾಠೋಡ, ಎಂ.ವಾಯ್. ಅವಧೂತ, ಬಸವರಾಜ ಶೀಲವಂತರ, ಬಸವರಾಜ ಹೂಗಾರ, ಹನಮಂತ ಕುರಿ, ಕನಕಪ್ಪ ಕಲ್ಲೋಡ್ಡರ, ವಿರೇಶ ರಾಠೋಡ, ಸಿದ್ದು ಗೊಂಗಡಶೆಟ್ಟಿಮಠ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.




# ಕಟ್ಟಡ ನಿರ್ಮಾಣದಲ್ಲಿ ನಿಯಮ ಪಾಲನೆ, ಜವಾಬ್ದಾರಿ ಅಗತ್ಯ: ಪೌರಾಯುಕ್ತ ಜ್ಯೋತಿಗಿರೀಶ್ ಕರೆ

**ಸತ್ಯಮಿಥ್ಯ ಸುದ್ದಿಮೂಲ ಜಮಖಂಡಿ:**
ಕಟ್ಟಡ ನಿರ್ಮಾಣದಲ್ಲಿ ಇಂಜಿನಿಯರ್‌ಗಳು ಕೇವಲ ಪ್ಲಾನಿಂಗ್ ಮಾಡುವುದಕ್ಕೆ ಸೀಮಿತವಾಗದೆ, ಆರಂಭಿಕ ಹಂತದಿಂದ ಕಾಮಗಾರಿ ಪೂರ್ಣಗೊಳ್ಳುವವರೆಗೆ ಪ್ರತಿಯೊಂದು ಹಂತದಲ್ಲೂ ಗುಣಮಟ್ಟ, ನಿಯಮ ಹಾಗೂ ಅಗತ್ಯ ಪ್ರಕ್ರಿಯೆಗಳ ಪಾಲನೆಯೊಂದಿಗೆ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ಪೌರಾಯುಕ್ತ ಜ್ಯೋತಿಗಿರೀಶ್ ಹೇಳಿದರು.

ನಗರದ ಹೆಸ್ಕಾಂ ಫಂಕ್ಷನ್ ಹಾಲ್‌ನಲ್ಲಿ ಮಂಗಳವಾರ ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಸಂಘದ ವತಿಯಿಂದ ಸರ್ ಎಂ. ವಿಶ್ವೇಶ್ವರಯ್ಯ ಅವರ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ 'ಇಂಜಿನಿಯರ್ಸ್ ಡೇ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗುಣಮಟ್ಟದ ಕಾಮಗಾರಿ ಮತ್ತು ನಿಯಮ ಪಾಲನೆ:
ಕಟ್ಟಡ ನಿರ್ಮಾಣದ ಆರಂಭದಲ್ಲಿಯೇ ಜಿಪಿಎಸ್, ಛಾಯಾಚಿತ್ರ ಹಾಗೂ ಅಗತ್ಯ ದಾಖಲೆಗಳನ್ನು ಸಮರ್ಪಕವಾಗಿ ನಿರ್ವಹಿಸುವುದರಿಂದ ಮುಂದಿನ ಹಂತಗಳಲ್ಲಿ ಎದುರಾಗಬಹುದಾದ ಸಮಸ್ಯೆಗಳನ್ನು ತಪ್ಪಿಸಲು ಸಾಧ್ಯವಾಗುತ್ತದೆ ಎಂದ ಪೌರಾಯುಕ್ತರು, ಜಮಖಂಡಿ ನಗರದ ಅಭಿವೃದ್ಧಿಗೆ ಅನುದಾನದ ಕೊರತೆಯಿದ್ದರೂ ನಗರಸಭೆಯಿಂದ ಸಾಧ್ಯವಾದಷ್ಟು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಸಂಚಾರ ವ್ಯವಸ್ಥೆ ಸುಧಾರಿಸಲು ಟ್ರಾಫಿಕ್ ಸಿಗ್ನಲ್ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು. ನಗರದ ಭವಿಷ್ಯದ ಅಭಿವೃದ್ಧಿಯಲ್ಲಿ ಮಕ್ಕಳ ಆಲೋಚನೆಗಳಿಗೂ ಮಹತ್ವ ನೀಡಬೇಕು ಎಂದು ತಿಳಿಸಿದರು.

ಇದೇ ವೇಳೆ, ಅಸೋಸಿಯೇಷನ್ ಬಲಿಷ್ಠವಾದ ನಂತರ ಇಂಜಿನಿಯರ್‌ಗಳಿಗಾಗಿ ಪ್ರತ್ಯೇಕ ಸ್ಥಳ ಸಿದ್ಧಪಡಿಸುವ ಕುರಿತು



ಚಿಂತನೆ ನಡೆಸಬಹುದು. ಸದಸ್ಯರ ಸಹಕಾರದೊಂದಿಗೆ ಸ್ವಂತ ಭವನ ನಿರ್ಮಿಸಿಕೊಂಡು ಆರ್ಥಿಕ ಬಲ ಕಲ್ಪಿಸಿಕೊಳ್ಳಬಹುದು. ಮುಂದಿನ ದಿನಗಳಲ್ಲಿ ವಿಶ್ವೇಶ್ವರಯ್ಯ ದಿನಾಚರಣೆಯನ್ನು ಕುಟುಂಬ ಸದಸ್ಯರೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಆಚರಿಸಬಹುದು ಎಂದು ಸಲಹೆ ನೀಡಿದರು.

**ಸಮಯಪಾಲನೆ ಮತ್ತು ಕರ್ತವ್ಯನಿಷ್ಠೆ:** ಹಿರಿಯ ಇಂಜಿನಿಯರ್ ಮುಂಡಗನೂರ ಮಾತನಾಡಿ, ಸಮಯಕ್ಕೆ ಅತ್ಯಂತ ಮಹತ್ವ ನೀಡಿ, ವ್ಯವಸ್ಥಿತವಾಗಿ ಕೆಲಸ ಮಾಡುವ ಅಭ್ಯಾಸ ಬೆಳೆಸಿಕೊಳ್ಳಬೇಕು. ಸರ್ ಎಂ. ವಿಶ್ವೇಶ್ವರಯ್ಯ ಅವರ ಶ್ರದ್ಧೆ, ಶಿಸ್ತು, ಸಮಯಪಾಲನೆ, ಕರ್ತವ್ಯನಿಷ್ಠೆ ಹಾಗೂ ಬದ್ಧತೆ ಇಂದಿನ ಪೀಳಿಗೆಗೆ ಆದರ್ಶವಾಗಿದೆ ಎಂದು ಅವರ ಜೀವನದ ಪ್ರಸಂಗವನ್ನು ವಿವರಿಸಿದರು.

**ತಂತ್ರಜ್ಞಾನದ ಸದುಪಯೋಗ ಮತ್ತು ಜಾಗೃತಿ:** ಕೆಇಬಿಯ ಎಇಇ ವಿಶಾಲ ಧರೆಪ್ಪಗೋಳ ಮಾತನಾಡಿ, ತಂತ್ರಜ್ಞಾನ ಹಾಗೂ ಆವಿಷ್ಕಾರಗಳ ಮೂಲಕ ಮಾನವ ಜೀವನವನ್ನು ಸರಳ, ಸುಲಭ ಮತ್ತು ಸುರಕ್ಷಿತಗೊಳಿಸುವುದೇ ಇಂಜಿನಿಯರಿಂಗ್‌ನ ಮೂಲ ಉದ್ದೇಶವಾಗಿದೆ ಎಂದರು. ನಗರದ ಮಾಸ್ಟರ್‌ಪ್ಲಾನ್ ಸಂಪೂರ್ಣ ಅನುಷ್ಠಾನ ಅಗತ್ಯವಿದ್ದು, ಅನುಮೋದಿತ ಪ್ಲಾನ್‌ಗೆ ವಿರುದ್ಧವಾಗಿ ಕಟ್ಟಡ ನಿರ್ಮಿಸಿದರೆ ಸಿಸಿ, ಒಸಿ ಹಾಗೂ ವಿದ್ಯುತ್ ಸಂಪರ್ಕ ಪಡೆಯಲು ಸಮಸ್ಯೆಗಳಾಗುತ್ತವೆ ಎಂದು ಎಚ್ಚರಿಸಿದರು.

ಮಳೆಯ ಕೊರತೆಯಿಂದ ಜಲವಿದ್ಯುತ್ ಉತ್ಪಾದನೆ ಇಳಿಕೆಯಾಗಿದ್ದು, ಸಾರ್ವಜನಿಕರು ಹಾಗೂ ರೈತರು ಅಗತ್ಯವಿರುವಷ್ಟು ಮಾತ್ರ ವಿದ್ಯುತ್ ಬಳಸಿ ಸಹಕರಿಸಬೇಕು ಎಂದು ಮನವಿ ಮಾಡಿದರು. ಸಿವಿಲ್, ಮೆಕ್ಯಾನಿಕಲ್, ಕೆಮಿಕಲ್, ಎಲೆಕ್ಟ್ರಿಕಲ್ ಸೇರಿದಂತೆ ವಿವಿಧ ವಿಭಾಗಗಳ ಇಂಜಿನಿಯರ್‌ಗಳು ಸಮಾಜದ ಅಭಿವೃದ್ಧಿಗೆ ಕೈಜೋಡಿಸುವುದು ಜವಾಬ್ದಾರಿಯಾಗಿದೆ ಎಂದರು.

ಬಹುಮಾನ ವಿತರಣೆ: ಕಾರ್ಯಕ್ರಮದಲ್ಲಿ 'ನನ್ನ ಕನಸಿನ ಜಮಖಂಡಿ' ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿ ಸನ್ಮಾನಿಸಲಾಯಿತು.

ಗಣ್ಯರ ಉಪಸ್ಥಿತಿ: ಕಾರ್ಯಕ್ರಮದಲ್ಲಿ ಅಸೋಸಿಯೇಷನ್ ಅಧ್ಯಕ್ಷ ಎ.ಆರ್. ಶಿಂಧೆ, ಉಪಾಧ್ಯಕ್ಷ ವಿಜಯ ಕಟಗಿ, ಖಜಾಂಚಿ ಉದಯ ಮುನ್ನೋಳಿ, ಪದಾಧಿಕಾರಿಗಳಾದ ರವಿ ಶಿಂಧೆ, ಗುಲಾಮಳಿ, ವೈಭವ ಕಮರಡಗಿ, ಕೊಟ್ಟಲಗಿ, ಪಂದರಿನಾಥ ವೈದ್ಯ, ಸದಾಶಿವ ಮಾಳಿ, ಸಚಿನ್ ಪಡಸಲಗಿ, ಪ್ರದೀಪ ನವಣಿ, ಶಿವಪ್ಪ ತಳವಾರ, ಶ್ರೀರಾಮ ಜೋಶಿ, ರಮೇಶ್ ಕಲ್ಲೋಳಿ, ಕಿರಣ ಬಿರಾದಾರ, ರಾಜತ ಮಹಾಬಳಶೆಟ್ಟಿ, ಮುತ್ತುರಾಜ ಹಂಡಿಗುಂಡ, ಕೃಷ್ಣ ಪಡಕಿ ಸೇರಿದಂತೆ ವಿವಿಧ ವಿಭಾಗಗಳ ಇಂಜಿನಿಯರ್‌ಗಳು ಉಪಸ್ಥಿತರಿದ್ದರು.

ಜೆ.ಎ. ನದಾಫ ಸ್ವಾಗತಿಸಿ, ವಂದಿಸಿದರು.

ಸತ್ಯ ಮಿಥ್ಯ
ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ

SATY MITHI
Kannada Daily Morning

# ವೈದ್ಯನಾಗುವ ಕನಸಿನತ್ತ ಅರ್ಜುನ್ ಹೆಜ್ಜೆ; ಸಾಧನೆಗೆ ಕನ್ನೊಳ್ಳಿ ಗ್ರಾಮಸ್ಥರ ಹರ್ಷ

**ಸತ್ಯಮಿಥ್ಯ ಸುದ್ದಿಮೂಲ ಬಾಗಲಕೋಟೆ:**
ಜಮಖಂಡಿ ತಾಲೂಕಿನ ಸಾವಳಗಿ ಸಮೀಪದ ಕನ್ನೊಳ್ಳಿ ಗ್ರಾಮದ ಅಪ್ಪಾಸಾಬ ಕೊಕರೆ ಅವರ ಪುತ್ರ ಅರ್ಜುನ್ ಅಪ್ಪಾಸಾಬ ಕೊಕರೆ ಅವರು ವೈದ್ಯಕೀಯ ಶಿಕ್ಷಣ ಪ್ರವೇಶದಲ್ಲಿ ಸರ್ಕಾರಿ ಕೋಟಾದಡಿ ಎಂಬಿಬಿಎಸ್ ಸೀಟು ಪಡೆದು ಗಮನಾರ್ಹ ಸಾಧನೆ ಮಾಡಿದ್ದಾರೆ. ಬೆಂಗಳೂರಿನ ಪ್ರತಿಷ್ಠಿತ ಎಂ.ವಿ.ಜೆ. ಮೆಡಿಕಲ್ ಕಾಲೇಜ್ □□□ಂಡ್ ರಿಸರ್ಚ್ ಕಾಲೇಜಿಗೆ ಎಂಬಿಬಿಎಸ್ ವ್ಯಾಸಂಗಕ್ಕಾಗಿ ಆಯ್ಕೆಯಾಗಿರುವುದು ಕುಟುಂಬಸ್ಥರು ಹಾಗೂ ಗ್ರಾಮಸ್ಥರಲ್ಲಿ ಸಂತಸ ಮೂಡಿಸಿದೆ.

ಸಾಧಾರಣ ಕುಟುಂಬದ ಹಿನ್ನೆಲೆಯಿಂದ ಬಂದಿರುವ ಅರ್ಜುನ್ ಅವರು ತಮ್ಮ ಪರಿಶ್ರಮ, ಶ್ರದ್ಧೆ ಹಾಗೂ ವಿದ್ಯಾಭ್ಯಾಸದ ಮೂಲಕ ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಅವರ ಈ ಸಾಧನೆ ಕನ್ನೊಳ್ಳಿ ಗ್ರಾಮದ ಯುವ ವಿದ್ಯಾರ್ಥಿಗಳಿಗೆ ಶಿಕ್ಷಣದ ಮೂಲಕ ಉನ್ನತ ಗುರಿ ಸಾಧಿಸಬಹುದು ಎಂಬ ಆತ್ಮವಿಶ್ವಾಸ ಮೂಡಿಸುವಂತಾಗಿದೆ.

ಅರ್ಜುನ್ ಅವರ ವೈದ್ಯಕೀಯ ಶಿಕ್ಷಣದ ಪ್ರವೇಶವನ್ನು ಮೆಚ್ಚಿದ ಕನ್ನೊಳ್ಳಿ ಗ್ರಾಮದ ಗ್ರಾಮಸ್ಥರು, ಯುವಕರು ಹಾಗೂ ಹಿರಿಯರು ಅವರ ಮನೆಗೆ ತೆರಳಿ ಸನ್ಮಾನಿಸಿ ಅಭಿನಂದಿಸಿದರು. ಮುಂದಿನ ದಿನಗಳಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಉತ್ತಮ ಜ್ಞಾನ ಹಾಗೂ ಕೌಶಲ್ಯವನ್ನು ಪಡೆದು, ಬಡವರು ಮತ್ತು ಗ್ರಾಮೀಣ ಜನರಿಗೆ ನೆರವಾಗುವ ಸೇವಾ ಮನೋಭಾವದ ವೈದ್ಯರಾಗಿ ಹೊರಹೊಮ್ಮಬೇಕು ಎಂದು ಶುಭ ಹಾರೈಸಿದರು.



ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಸಾಧನೆ ಮಾಡುವ ಮೂಲಕ ಉನ್ನತ ಶಿಕ್ಷಣದ ಅವಕಾಶಗಳನ್ನು ಪಡೆದುಕೊಳ್ಳುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ. ಅರ್ಜುನ್ ಅವರ ಯಶಸ್ಸು ಕುಟುಂಬದ ಹೆಮ್ಮೆಯ ಜೊತೆಗೆ ಇಡೀ ಕನ್ನೊಳ್ಳಿ ಗ್ರಾಮದ ಹೆಮ್ಮೆಯ ವಿಷಯವಾಗಿದೆ ಎಂದು ಗ್ರಾಮಸ್ಥರು ಸಂತಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಅಣಪ್ಪ ಮೋಹಿತೆ, ಅಪ್ಪಾಸಾಬ ಕೊಕರೆ, ಉಮೇಶ್ ಮೋಹಿತೆ,ಉಮೇಶ್ ಜಾಧವ್,ರಾಜು ಮೋಹಿತೆ,ಅಶೋಕ ಬಿರಾದಾರ, ಸಂತೋಷ ಕೊಕರೆ ಸೇರಿದಂತೆ ಗ್ರಾಮಸ್ಥರು ಹಾಗೂ ಕುಟುಂಬಸ್ಥರು ಉಪಸ್ಥಿತರಿದ್ದು, ಅರ್ಜುನ್ ಅವರಿಗೆ ಅಭಿನಂದನೆ ಸಲ್ಲಿಸಿದರು.

ಅರ್ಜುನ್ ಕೊಕರೆ ಅವರ ಈ ಸಾಧನೆಗೆ ಕನ್ನೊಳ್ಳಿ ಗ್ರಾಮದಲ್ಲಿ ಅಭಿನಂದನೆಗಳ ಮಹಾಪೂರವೇ ಹರಿದುಬಂದಿದ್ದು, ಅವರ ವೈದ್ಯಕೀಯ ಶಿಕ್ಷಣದ ಭವಿಷ್ಯ ಉಜ್ವಲವಾಗಲಿ ಎಂಬ ಹಾರೈಕೆಗಳು ಕೇಳಿಬಂದವು.

# ವೇಮನ ಕೋ-ಆಪ್ ಕ್ರೆಡಿಟ್ ಸೊಸೈಟಿಗೆ 3.06 ಕೋಟಿ ಲಾಭ, ಸಾವಿರ ಕೋಟಿ ವ್ಯವಹಾರ

**ಸತ್ಯಮಿಥ್ಯ ಸುದ್ದಿಮೂಲ ಮೂಡಲಗಿ:**
300 ಸದಸ್ಯರೊಂದಿಗೆ ಆರಂಭವಾದ ವೇಮನ ಕೋ-ಆಪ್ ಕ್ರೆಡಿಟ್ ಸೊಸೈಟಿ ಇಂದು 4 ಸಾವಿರ ಸದಸ್ಯರನ್ನು ಹೊಂದಿದ್ದು, ಸಾವಿರ ಕೋಟಿ ವ್ಯವಹಾರ ನಡೆಸುತ್ತಿದೆ. ಈ ಸಂಘದ ಬೆಳವಣಿಗೆಗೆ ಮುಖ್ಯ ಕಾರಣ ಸಿಬ್ಬಂದಿ ವರ್ಗ ಎಂದು ಸಂಸ್ಥೆಯ ಅಧ್ಯಕ್ಷ ಸಂತೋಷ ಸೋನವಾಲಕರ ಹೇಳಿದರು.

ಬುಧವಾರ ನಡೆದ ವೇಮನ ಕೋ-ಆಪ್ ಕ್ರೆಡಿಟ್ ಸೊಸೈಟಿಯ 25 ನೇ ವಾರ್ಷಿಕ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಂಸ್ಥೆಯ ಆರ್ಥಿಕ ಪ್ರಗತಿ ವಿವರ:
ಸಂಸ್ಥೆಯು ಶೇರು ಬಂಡವಾಳ 3 ಕೋಟಿ 58 ಲಕ್ಷ, ನಿಧಿಗಳು 12 ಕೋಟಿ 30 ಲಕ್ಷ, ಠೇವುಗಳು 183 ಕೋಟಿ 62 ಲಕ್ಷ, ಸಾಲ ವಿತರಣೆ 114 ಕೋಟಿ 24 ಲಕ್ಷ ಹಾಗೂ ದುಡಿಯುವ ಬಂಡವಾಳ 208 ಕೋಟಿ 96 ಲಕ್ಷ ಹೊಂದಿದೆ. ಮಾರ್ಚ್ ಅಂತ್ಯಕ್ಕೆ ಸಂಘವು 3 ಕೋಟಿ 6 ಲಕ್ಷ ಲಾಭ ಗಳಿಸಿದೆ. ಹುಲಕುಂದ, ರಾಮದುರ್ಗ, ಹೊಸಕೋಟಿ, ಯಾದವಾಡ, ಮುಧೋಳ, ಜಮಖಂಡಿ, ಯರಗಟ್ಟಿ ಹಾಗೂ ಸವದತ್ತಿ ಶಾಖೆಗಳು ಪ್ರಗತಿಯಲ್ಲಿವೆ ಎಂದು ಸಂತೋಷ ಸೋನವಾಲಕರ ತಿಳಿಸಿದರು.

ಸಭೆಯಲ್ಲಿ ನಿವೃತ್ತ ಪ್ರಾಚಾರ್ಯ ಸಂಗಮೇಶ ಗುಜಗೊಂಡಮಾತನಾಡಿ,"ಸಂಸ್ಥೆಯಬೆಳವಣಿಗೆಯಲ್ಲಿ ಅದರಆರಂಭದದಿನಗಳನ್ನುಗಮನಿಸಬೇಕು.ಸಂಘವು ಮಹತ್ತರ ಹೆಜ್ಜೆಗುರುತುಗಳನ್ನು ಮೂಡಿಸುತ್ತಿದೆ. ಸಂಸ್ಥೆಯ ಪ್ರಗತಿಗೆ ಸಾಲಗಾರರು, ಠೇವಣಿದಾರರು ಹಾಗೂ ಸಿಬ್ಬಂದಿಯ ಕಾರ್ಯಕ್ಷಮತೆ ಮುಖ್ಯ. ಅವರ ದೂರದೃಷ್ಟಿಯ ಕೆಲಸವೇ ಸಂಸ್ಥೆಯ ಬೆಳವಣಿಗೆಗೆ ಮೂಲ. ನಂಬಿಕೆ ಮತ್ತು ವಿಶ್ವಾಸ ಸಹಕಾರ ಸಂಘದ ಅಡಿಪಾಯವಾಗಿದ್ದು, ಗ್ರಾಮೀಣ ಭಾಗಗಳಲ್ಲಿ ಇವುಗಳ ಪಾತ್ರ ಮಹತ್ವದ್ದಾಗಿದೆ. ಬಡತನ ನಿರ್ಮೂಲನೆ, ಗ್ರಾಮೀಣಾಭಿವೃದ್ಧಿ ಹಾಗೂ ಸುಸ್ಥಿರ ಬೆಳವಣಿಗೆಗೆ ಸಹಕಾರ ಸಂಸ್ಥೆಗಳು ಆದ್ಯತೆ ನೀಡಬೇಕು. ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಸಹಕಾರ ಸಂಘಗಳ ಪಾತ್ರ ದೊಡ್ಡದಿದ್ದು, ಸಾಲ ಕೊಡುವ ಸಂಸ್ಥೆಗಿಂತ ಸಾಲ ಪಡೆದವನ ಬೆಳವಣಿಗೆ ಮುಖ್ಯವಾಗಿದೆ" ಎಂದರು.

ವೇದಿಕೆಯ ಮೇಲೆ ಉಪಾಧ್ಯಕ್ಷ ಹಣಮಂತ ಪ್ಯಾಟಿಗೌಡರ, ಶಂಕರ ಹ. ಸೋನವಾಲಕರ, ಆರ್. ಆರ್. ಪ್ಯಾಟಿಗೌಡರ, ಜಿ. ಟಿ. ಸೋನವಾಲಕರ, ನಿಂಗಪ್ಪ ಚಿಂಚಲಿ, ಬೆಳಗಾವಿ ಜಿಲ್ಲಾ ಯೂನಿಯನ್ ನಿರ್ದೇಶಕರಾದ ವರ್ಧಮಾನ ಬೋಳಿ, ಜಿ. ವ್ಹಿ. ಪ್ಯಾಟಿಗೌಡರ, ಜಿ. ಪಿ. ನಾಯಿಕ, ಅಶೋಕ ನಾಡಗೌಡರ, ಮಂಜುನಾಥ ಶೆಟ್ಟಿ, ಎಸ್. ಕೆ. ಬಾಲನಾಯಿಕ ಉಪಸ್ಥಿತರಿದ್ದರು. ಹಾಗೆಯೇ, ಸೊಸೈಟಿಯ ನಿರ್ದೇಶಕರಾದ ವಿಜಯ ಸೋನವಾಲಕರ, ಪಾಂಡು ಸೋನವಾಲಕರ, ತಮ್ಮಣ್ಣ ಯುಂಢೆಕುರುಬರ, ಹಣಮಂತ ದಂಡಪ್ಪನ್ನವರ, ಸಿದ್ದಪ್ಪ ದೊಕ ಪೂಜೇರಿ, ಸಚೀನ ಸೋನವಾಲಕರ, ವಿಠಲ್ ಸಂತಿ, ಲತಾ ಸತರಡ್ಡಿ, ಲಕ್ಷ್ಮಿಬಾಯಿ ಮಂಟನ್ನವರ, ರಾಮಪ್ಪ ಹಾದಿಮನಿ ಹಾಗೂ ಪ್ರಧಾನ ವ್ಯವಸ್ಥಾಪಕ ಪರಶುರಾಮ ಕುರಹಟ್ಟಿ ಉಪಸ್ಥಿತರಿದ್ದರು. ಸಭೆಯಲ್ಲಿ ಲಕ್ಷ್ಮಿ ಕುರುಬಗಟ್ಟಿ ವರದಿ ವಾಚನ ಮಾಡಿದರು. ಅಡಾವೆ ಪತ್ರಿಕೆಯನ್ನು ಸುವರ್ಣಾ ಮರಾಠೆ, ಲಾಭ-ಹಾನಿ ವರದಿಯನ್ನು ಎ. ಎನ್. ಅಣ್ಣಿಗೇರಿ ಹಾಗೂ ಕ್ರೋಡೀಕೃತ ಲಾಭ-ಹಾನಿ ವರದಿಯನ್ನು ಸಂಗಪ್ಪ ಪೋಲಿಸ ಮಂಡಿಸಿದರು. ಎಸ್. ಎಮ್. ಶೆಟ್ಟರ ಸ್ವಾಗತಿಸಿದರು, ಶಿಕ್ಷಕ ಟಿ. ಬಸವರಾಜ ಕಾರ್ಯಕ್ರಮ ನಿರೂಪಿಸಿದರು ಮತ್ತು ಬಿ. ಬಿ. ಸಿಂಧೂರ ವಂದಿಸಿದರು.



# ಛಾಯಾಗ್ರಾಹಕರ ಸೇವೆ ಸಮಾಜದ ನೆನಪುಗಳನ್ನು ಶಾಶ್ವತಗೊಳಿಸುತ್ತದೆ: ಸಿದ್ದಣ್ಣ ಬಂಡಿ

**ಸತ್ಯಮಿಥ್ಯ ಸುದ್ದಿಮೂಲ ಗಜೇಂದ್ರಗಡ:**
ಛಾಯಾಗ್ರಾಹಕರು ಸಮಾಜದ ಪ್ರತಿಯೊಂದು ಮಹತ್ವದ ಕ್ಷಣವನ್ನು ತಮ್ಮ ಕ್ಯಾಮೆರಾದಲ್ಲಿ ಸೆರೆಹಿಡಿದು, ಅದನ್ನು ಮುಂದಿನ ಪೀಳಿಗೆಗೂ ನೆನಪಾಗಿ ಉಳಿಸುವ ಮಹತ್ವದ ಕಾರ್ಯಮಾಡುತ್ತಿದ್ದಾರೆಎಂದುಸಿದ್ದಣ್ಣಬಂಡಿಹೇಳಿದರು. ನಗರದ ಈಶ್ವರ ದೇವಾಲಯದ ಸಮುದಾಯ ಭವನದಲ್ಲಿ ಗುರುವಾರ ಗಜೇಂದ್ರಗಡ ತಾಲೂಕಾ ಛಾಯಾಗ್ರಾಹಕರ ಕ್ಷೇಮಾಭಿವೃದ್ಧಿ ಹಾಗೂ ವಿವಿಧೋದ್ದೇಶಗಳ ಸಂಘದ ವತಿಯಿಂದಆಯೋಜಿಸಿದ್ದ187ನೇವಿಶ್ವಛಾಯಾಗ್ರಾಹಕರ ದಿನಾಚರಣೆ,ಸನ್ಮಾನಹಾಗೂಪದಾಧಿಕಾರಿಗಳಪದಗ್ರಹಣ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಛಾಯಾಗ್ರಹಣ ಕ್ಷೇತ್ರದಲ್ಲಿ ಹಲವು ಸವಾಲುಗಳಿದ್ದರೂ, ಛಾಯಾಗ್ರಾಹಕರು ತಮ್ಮ ವೃತ್ತಿಯ ಮೂಲಕ ಸಮಾಜಕ್ಕೆ ಅಮೂಲ್ಯ ಸೇವೆ ಸಲ್ಲಿಸುತ್ತಿದ್ದಾರೆ. ಕಾಲ ಬದಲಾದಂತೆ ಛಾಯಾಗ್ರಹಣ ಕ್ಷೇತ್ರದಲ್ಲೂ ತಂತ್ರಜ್ಞಾನದಲ್ಲಿ ಸಾಕಷ್ಟು ಬದಲಾವಣೆಗಳಾಗಿದ್ದು, ಅದಕ್ಕೆ ಹೊಂದಿಕೊಂಡು ವೃತ್ತಿಪರ ಕೌಶಲ್ಯವನ್ನು ಬೆಳೆಸಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

**ಇತಿಹಾಸ ಸಂರಕ್ಷಿಸುವ ಕಾರ್ಯ:** ಕಾರ್ಯಕ್ರಮದ ಅತಿಥಿ ಮುರ್ತುಜಾ ಡಾಲಾಯತ ಮಾತನಾಡಿ, ಛಾಯಾಗ್ರಾಹಕರ ವೃತ್ತಿ ಕೇವಲ ಚಿತ್ರ ಸೆರೆಹಿಡಿಯುವುದಕ್ಕೆ ಸೀಮಿತವಾಗಿಲ್ಲ. ವ್ಯಕ್ತಿ ಹಾಗೂ ಸಮಾಜದ ಪ್ರಮುಖ ಘಟನೆಗಳನ್ನು ದಾಖಲಿಸುವ ಮೂಲಕ ಇತಿಹಾಸವನ್ನು ಸಂರಕ್ಷಿಸುವ ಕಾರ್ಯವೂ ಆಗಿದೆ. ಛಾಯಾಗ್ರಾಹಕರ ಕ್ಷೇಮಾಭಿವೃದ್ಧಿಗಾಗಿ ಸಂಘವು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಬೇಕು ಎಂದರು.



ವೆಂಕಟಾಪೂರ-ಜಿಗೇರಿ ಷ.ಬ್ರ. ಗುರುಸಿದ್ದೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ತಾಲೂಕಾ ಛಾಯಾಗ್ರಾಹಕರ ಸಂಘದ ಅಧ್ಯಕ್ಷ ಸುಭಾಷ್ ಬಡಿಗೇರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರೆ, ನಿಂಗಪ್ಪ ಕಾಶಪ್ಪನವರ ಸಂಘದ ಪ್ರಾಸ್ತಾವಿಕವಾಗಿ ಮಾತನಾಡಿದರು.

**ಹಿರಿಯ ಛಾಯಾಗ್ರಾಹಕರಿಗೆ ಸನ್ಮಾನ:** ಇದೇ ಸಂದರ್ಭದಲ್ಲಿ ಹಿರಿಯ ಛಾಯಾಗ್ರಾಹಕರಾದ ಹುಚ್ಚಪ್ಪ ಹಾವೇರಿ, ಮಂಜುನಾಥ ನಾವಡೆ, ರಮೇಶ ಸಾಬಳೆ, ಡಿ.ಆರ್. ಬಡಿಗೇರ ಹಾಗೂ ರಫೀಕ ನದಾಫ್ ಅವರನ್ನು ವಿಶೇಷವಾಗಿ ಸನ್ಮಾನಿಸಲಾಯಿತು. ಇದೇ ವೇಳೆ ನೂತನ ಪದಾಧಿಕಾರಿಗಳ ಪದಗ್ರಹಣವೂ ನಡೆಯಿತು.

ಕಾರ್ಯಕ್ರಮದಲ್ಲಿ ನ್ಯಾಯವಾದಿ ಶ್ರೀಕಾಂತ ಅವಧೂತ, ಶಿವಕುಮಾರ ಜಾಲಿಹಾಳ, ಕಳಕಪ್ಪ ಪುರ್ತಗೇರಿ, ಪಿ.ಎಸ್. ಪಾಟೀಲ, ಬಸವರಾಜ ಪಲ್ಲೇದ, ಜಗದೀಶ ಕಪ್ಲಿ, ಹನಮಂತ ರಾಠೋಡ, ನಿಂಗಪ್ಪ ಕಾಶಪ್ಪನವರ, ಮನು ಸೂರ್ಯವಂಶಿ, ಸಮೀರ ಬಳಬಟ್ಟಿ, ರವಿ ಆರೇರ, ಶ್ಯಾಮಸುಂದರ ಕಂಪ್ಲಿ, ರವಿಚಂದ್ರ ಹೋರಪೇಟಿ, ಮಧುಸೂದನ ಧಲಭಂಜನ, ಬಾಬು ಬದಿ, ರಹಿಮ್ ಯಲಬುಣಚಿ, ಹುಲ್ಲಪ್ಪ ಅರಗಂಜಿ, ಮುಸ್ತಾಪ ಮುಚ್ಚಾಲಿ, ಶಿವಾನಂದ ಜೂಲಗುಡ್ಡ, ಕಳಕಪ್ಪ ಬೇವಿನಕಟ್ಟಿ, ಕಾಳಿಂಗ ಚಿಲಝೇರಿ, ನಾಗರಾಜ ಘೋರ್ಪಡೆ, ಸಿದ್ದಣ್ಣ ಅಂಗಡಿ, ವಿರೇಶ ಅಂಗಡಿ, ನಾಗರಾಜ ಗೌಡರ, ಬಸವರಾಜ ರಾಠೋಡ, ಮಂಜು ಬಿ., ನಾಗರಾಜ ಉಪ್ಪಾರ, ಸಿದ್ದು ಬನ್ನಿಗೋಳ, ಶರಣು ಕಿಟಗೇರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಸುರೇಶ ಕಲಾಪ್ರಿಯಗೆ 'ರಾಜ್ಯಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ'

**ಸತ್ಯಮಿಥ್ಯ ಸುದ್ದಿಮೂಲ ಗಂಗಾವತಿ :**
ಕಪ್ಪತಗಿರಿ ಫೌಂಡೇಶನ್ ಶೈಕ್ಷಣಿಕ ಹಾಗೂ ಮಕ್ಕಳ ಸರ್ವತೋಮುಖ ಬೆಳವಣಿಗೆಗಾಗಿಶ್ರಮಿಸಿದಶಿಕ್ಷಕರನ್ನುಗುರುತಿಸಿಗೌರವಿಸುವಕಾರ್ಯಮಾಡುತ್ತಾ ಬಂದಿದೆ. ಎಲೆಮರೆಕಾಯಿಯಂತಿರುವ ರಾಜ್ಯದ ಶಿಕ್ಷಕರನ್ನು ಗುರುತಿಸಿ ಅವರಿಗೆ ರಾಜ್ಯಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ನೀಡುವ ಮೂಲಕ ಅವರ ಸಮಾಜಮುಖಿ, ಶೈಕ್ಷಣಿಕ ಚಟುವಟಿಕೆಗಳಿಗೆ ಇನ್ನಷ್ಟು ಪ್ರೋತ್ಸಾಹ ನೀಡುವ ಕಾರ್ಯ ಮಾಡುತ್ತಿದೆ. ಫೌಂಡೇಶನ್ ನ ಈ ಕಾರ್ಯಕ್ರಮಕ್ಕೆ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಸವಳ ಕ್ಯಾಂಪ್ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರಾದ ಸುರೇಶ ಜಿಎಸ್ ಕಲಾಪ್ರಿಯ ಆಯ್ಕೆಯಾಗಿದ್ದಾರೆ.



ಸುರೇಶ ಕಲಾಪ್ರಿಯ ಅವರು 2007 ರಲ್ಲಿ ಗಂಗಾವತಿ ತಾಲೂಕಿನ ಭಟ್ಟರ ನರಸಾಪುರ ಶಾಲೆಯಲ್ಲಿ ತಮ್ಮ ಸೇವೆಯನ್ನು ಆರಂಭಿಸಿ 13 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದು ತಮ್ಮ ಸೇವಾವಧಿಯಲ್ಲಿ ಮಕ್ಕಳ ಗುಣಾತ್ಮಕ ಶಿಕ್ಷಣಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಇಲಾಖೆ, ಸಮುದಾಯ ಹಾಗೂ ದಾನಿಗಳ ನೆರವಿನಿಂದ ಶಾಲೆಯನ್ನು ಅತ್ಯುತ್ತಮವಾಗಿ ಅಭಿವೃದ್ಧಿಪಡಿಸಿದ್ದಾರೆ. ಶಾಲೆಯಲ್ಲಿ ಗಿಡಮರಗಳನ್ನು ಪೋಷಿಸುವ ಮೂಲಕ ಅತ್ಯುತ್ತಮ ಪರಿಸರ ನಿರ್ಮಾಣ ಮಾಡಿದ್ದಾರೆ. ಶಾಲೆಯ ಕಾರ್ಯ ಚಟುವಟಿಕೆಗಳಿಗೆ ಅಂದರೆ ಕ್ರೀಡೆ, ಪ್ರತಿಭಾ ಕಾರಂಜಿಯಂತಹ ಸಾಧನೆಗಳಿಗೆ ತಮ್ಮದೇ ಕೊಡುಗೆ ನೀಡಿದ್ದಾರೆ. ನಂತರದ ಮರಳಿ ಸಮೂಹ ಸಂಪನ್ಮೂಲ ಕೇಂದ್ರದ ಸಂಪನ್ಮೂಲ ವ್ಯಕ್ತಿ ವೃತ್ತಿಯಲ್ಲಿ ತಮ್ಮ ವ್ಯಾಪ್ತಿಯ ಶಾಲೆಗಳ ಗುಣಾತ್ಮಕ ಬೆಳವಣಿಗೆಗೆ ಶ್ರಮಿಸಿದ್ದಾರೆ. ಕಳೆದೆರಡು ವರ್ಷಗಳಿಂದ ಸವಳ ಕ್ಯಾಂಪ್ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ಅತ್ಯುತ್ತಮ ಕಲಿಕೆ, ಶಾಲಾ ಪರಿಸರ, ಶಾಲಾ ಅಂದ ಚೆಂದ ಹಾಗೂ ದಾನಿಗಳ ನೆರವಿನಿಂದ ಶಾಲೆಗೆ ಅಗತ್ಯ ಪರಿಕರಗಳ ಪಡೆಯುವಿಕೆ ಹಾಗೂ ಪ್ರೊಜೆಕ್ಟರ್ ಮೂಲಕ ಸ್ಮಾರ್ಟ್ ಕ್ಲಾಸ್ ಕೂಡ ಆರಂಭಿಸಿ ಮಕ್ಕಳ ಕಲಿಕೆಗೆ ಶ್ರಮಿಸುತ್ತಿದ್ದಾರೆ. ಇವರ ಈ ಸಾಧನೆಗೆ ಕಪ್ಪತಗಿರಿ ಫೌಂಡೇಶನ್ ರಾಜ್ಯಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ನೀಡಿ ಗೌರವಿಸುತ್ತಿದೆ. ಕಾರ್ಯಕ್ರಮವು ದಿನಾಂಕ-20-09-2026ರಂದು ಭಾನುವಾರ ಗದಗದ ವಿದ್ಯಾದಾನ ಸಮಿತಿ ಶಿಕ್ಷಣ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಸುರೇಶ ಅವರಿಗೆ ರಾಜ್ಯ ಪ್ರಶಸ್ತಿ ದೊರೆತದಕ್ಕಾಗಿ ಕೊಪ್ಪಳ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶರಣೇಗೌಡ ಪೊಲೀಸ್ ಪಾಟೀಲ್, ತಾಲೂಕ ಅಧ್ಯಕ್ಷರಾದ ರುದ್ರೇಶ್ ಆರ್ಹಾಳ, ಕಾರ್ಯದರ್ಶಿಗಳಾದ ಶಿವಾನಂದ್ ತಿಮ್ಮಾಪುರ, ರಮೇಶ್ ಬಾಳಿಕಾಯಿ, ಕೊಪ್ಪಳ ಜಿಲ್ಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಶರಣಬಸವನಗೌಡ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತಾಲೂಕು ಘಟಕ ಗಂಗಾವತಿ, ಪತ್ತಿನ ಸಹಕಾರ ಸಂಘ ಗಂಗಾವತಿ, ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಅಶೋಕ ಗುಡಿಕೋಟಿ, ನೌಕರರ ಸಂಘದ ಅಧ್ಯಕ್ಷರಾದ ಶಿವಶಂಕರ್ ಕಲ್ಮಠ, ಕಾರ್ಯದರ್ಶಿಗಳಾದ ಶರಣಪ್ಪ ಹಕ್ಕಂಡಿ, ರಾಜ್ಯ ಪರಿಷತ್ ಸದಸ್ಯರಾದ ಉಮೇಶ್ ಹಾಗೂ ವಿವಿಧ ಶೈಕ್ಷಣಿಕ ಹಾಗೂ ಸಾಹಿತ್ಯಿಕ ಸಂಘಟನೆಗಳು ಅಭಿನಂದಿಸಿವೆ.

# ಗಾನಯೋಗಿ ಪುಟ್ಟರಾಜರ ಪುಣ್ಯಸ್ಮರಣೆ; ಮಳೆಗಾಗಿ ಭಕ್ತನ ಉರುಳು ಸೇವೆ

**ಸತ್ಯಮಿಥ್ಯ ಸುದ್ದಿಮೂಲ ನರೇಗಲ್ಲ :**
ಸಂಗೀತ, ಸೇವೆ ಹಾಗೂ ಆಧ್ಯಾತ್ಮಿಕತೆಯ ಮೂಲಕ ನಾಡಿನ ಜನಮಾನಸದಲ್ಲಿ ಅಚ್ಚಳಿಯದ ಗುರುತು ಮೂಡಿಸಿದ ಲಿಂ. ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿಗಳವರ 16ನೇ ವರ್ಷದ ಪುಣ್ಯಸ್ಮರಣೆ ಸಮೀಪದ ಜಕ್ಕಲಿ ಗ್ರಾಮದಲ್ಲಿ ಭಕ್ತಿ ಹಾಗೂ ಭಾವಪೂರ್ಣವಾಗಿ ನೆರವೇರಿತು.

ಗ್ರಾಮದಬಸ್‌ನಿಲ್ದಾಣದಪಕ್ಕದಲ್ಲಿರುವಲಿಂ.ಗಾನಯೋಗಿಡಾ.ಪುಟ್ಟರಾಜ ಗವಾಯಿಗಳವರ ಪುತ್ಥಳಿ ಬಳಿ ಗುರುವಾರ ಸ್ಥಳೀಯ ಕರ್ನಾಟಕ ರಕ್ಷಣಾ ವೇದಿಕೆ ಗ್ರಾಮ ಘಟಕ ಹಾಗೂ ಪುಟ್ಟರಾಜ ಗವಾಯಿಗಳವರ ಸೇವಾ ಸಮಿತಿ ಸಂಯುಕ್ತ ಆಶ್ರಯದಲ್ಲಿ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದ ಅಂಗವಾಗಿ ವೇದಮೂರ್ತಿ ಗುರುಲಿಂಗಮೂರ್ತಿ ಮಂಟಯ್ಯನಮಠ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಪುಟ್ಟರಾಜ ಗವಾಯಿಗಳವರ ಪುತ್ಥಳಿಗೆ ಮಹಾ ರುದ್ರಾಭಿಷೇಕ ಹಾಗೂ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಿದವು. ಭಕ್ತರು ಶ್ರದ್ಧಾಭಕ್ತಿಯಿಂದ ಪಾಲ್ಗೊಂಡು ಗಾನಯೋಗಿಗಳ ಸಂಗೀತ ಸೇವೆ, ಧಾರ್ಮಿಕ ಚಿಂತನೆ ಹಾಗೂ ಸಮಾಜಮುಖಿ ಬದುಕನ್ನು ಸ್ಮರಿಸಿದರು.

**ಮಳೆಗಾಗಿ ಭಕ್ತನ ಉರುಳು ಸೇವೆ:** ಗ್ರಾಮದಲ್ಲಿ ಮಳೆ ಕೊರತೆ-ಯ ಹಿನ್ನೆಲೆಯಲ್ಲಿ ಪುಟ್ಟರಾಜ ಗವಾಯಿಗಳವರ ಭಕ್ತ ಹಾಗೂ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಶಿವರಾಜ ಶರಣಪ್ಪ ಮುಗಳಿ ಅವರು ಮಳೆಗಾಗಿ ಪ್ರಾರ್ಥಿಸಿ ಉರುಳು ಸೇವೆ ಸಲ್ಲಿಸಿದರು.

ಆಂಜನೇಯ ದೇವಸ್ಥಾನದಿಂದ ಪುಟ್ಟರಾಜ ಗವಾಯಿಗಳವರ ಪುತ್ಥಳಿವರೆಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಉರುಳು ಸೇವೆ ಸಲ್ಲಿಸಿದ ಅವರು, ನಾಡಿಗೆ ಉತ್ತಮ ಮಳೆ ಸುರಿಯಲಿ, ರೈತರ ಹೊಲಗಳಲ್ಲಿ ಸಮೃದ್ಧ ಬೆಳೆ ಬೆಳೆಯಲಿ ಹಾಗೂ ಗ್ರಾಮಸ್ಥರ ಬದುಕಿನಲ್ಲಿ ನೆಮ್ಮದಿ ನೆಲೆಸಲಿ ಎಂದು ಪ್ರಾರ್ಥಿಸಿದರು.



ಈ ವೇಳೆ ಪತ್ರಿಕಾ ಪ್ರತಿನಿಧಿ ಸಂಗಮೇಶ ಮೆಣಸಗಿ ಅವರೊಂದಿಗೆ ಮಾತನಾಡಿದ ಶಿವರಾಜ ಮುಗಳಿ, "ಪುಟ್ಟರಾಜ ಗವಾಯಿಗಳವರು ಲಿಂಗೈಕ್ಯರಾದ ಬಳಿಕ ಅವರ ಪುಣ್ಯಸ್ಮರಣೆ ಅಂಗವಾಗಿ ಗ್ರಾಮದಲ್ಲಿ ಪುತ್ಥಳಿ ಪ್ರತಿಷ್ಠಾಪನೆ ಮಾಡಲಾಗಿದೆ. ಅಂದಿನಿಂದಲೂ ಪುತ್ಥಳಿ ಮೆರವಣಿಗೆಯ ಸಂದರ್ಭದಲ್ಲಿ ಉರುಳು ಸೇವೆ ಸಲ್ಲಿಸುತ್ತಿದ್ದು, ಸತತ 12 ವರ್ಷಗಳಿಂದ ಈ ಸೇವೆಯನ್ನು ಮಾಡಿಕೊಂಡು ಬರುತ್ತಿದ್ದೇನೆ. ಪುಟ್ಟರಾಜ ಗವಾಯಿಗಳು, ಅನ್ನದಾನೇಶ್ವರರು, ಅಣ್ಣಯ್ಯ□ತಮ್ಮಯ್ಯ ಶರಣರು ಸೇರಿದಂತೆ ಗ್ರಾಮದ ಗುರುಹಿರಿಯರು ಹಾಗೂ ಶರಣರ ಆಶೀರ್ವಾದದಿಂದ ಮಳೆಗಾಗಿ ಪ್ರಾರ್ಥಿಸಿ ಉರುಳು ಸೇವೆ ಸಲ್ಲಿಸಿದಾಗ ಉತ್ತಮ ಮಳೆಯಾಗಿರುವ ಅನುಭವವಿದೆ," ಎಂದರು.

"ಈ ವರ್ಷ ಮಳೆ ಕೊರತೆ ಹಾಗೂ ಅತಿವೃಷ್ಟಿಯ ಪರಿಸ್ಥಿತಿಯಿಂದ ರೈತರು ಸಂಕಷ್ಟದಲ್ಲಿದ್ದಾರೆ. ರೈತರ ಹೊಲಗಳಲ್ಲಿ ಉತ್ತಮ ಬೆಳೆ ಬರಬೇಕು, ಗ್ರಾಮಕ್ಕೆ ಸಮೃದ್ಧಿ ದೊರೆಯಬೇಕು ಎಂಬ ಆಶಯದಿಂದ ಈ ಸೇವೆ ಸಲ್ಲಿಸಿದ್ದೇನೆ. ಇದು ಜನಸೇವೆ ಹಾಗೂ ರೈತರ ಒಳಿತಿಗಾಗಿ ಸಲ್ಲಿಸುತ್ತಿರುವ ಭಕ್ತಿಯ ಸೇವೆಯಾಗಿದೆ," ಎಂದು ಹೇಳಿದರು.

ಗುರುವನ್ನು ಸ್ಮರಿಸುವ ಪುಣ್ಯ ದಿನದಂದು ಅನ್ನದಾತನ ಬದುಕಿಗೆ ಆಶಾಕಿರಣವಾಗಿರುವ ಮಳೆಗಾಗಿ ನಡೆದ ಈ ಭಕ್ತಿಪೂರ್ವಕ ಪ್ರಾರ್ಥನೆ ಗಮನ ಸೆಳೆಯಿತು. ಗಾನಯೋಗಿ ಪುಟ್ಟರಾಜ ಗವಾಯಿಗಳವರ ಸಂಗೀತ ಸೇವೆ, ಸರಳತೆ ಹಾಗೂ ಮಾನವೀಯ ಮೌಲ್ಯಗಳು ಇಂದಿಗೂ ಜನರಿಗೆ ಪ್ರೇರಣೆಯಾಗಿವೆ. ಅವರ ಸ್ಮರಣೆಯೊಂದಿಗೆ ನಡೆದ ಧಾರ್ಮಿಕ ಕಾರ್ಯಕ್ರಮವು ಭಕ್ತಿ ಮತ್ತು ಸಾಮಾಜಿಕ ಕಾಳಜಿಯ ಸಮ್ಮಿಲನಕ್ಕೆ ಸಾಕ್ಷಿಯಾಯಿತು.

ಇದೇ ಸಂದರ್ಭದಲ್ಲಿ ಭಕ್ತರು ಹಾಗೂ ಸಾರ್ವಜನಿಕರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.ಪೂಜಾಕಾರ್ಯಕ್ರಮಹಾಗೂಅನ್ನಸಂತರ್ಪಣೆಯಲ್ಲಿ ಗ್ರಾಮದ ಸಕಲ ಸದ್ಭಕ್ತರು ಪಾಲ್ಗೊಂಡರು.

ಈ ಸಂದರ್ಭದಲ್ಲಿ ಉಮೇಶ ಮೇಟಿ, ಮಲ್ಲಿಕಾರ್ಜುನ ಮುಧೋಳ, ವೀರಪ್ಪ ತಳವಾರ, ಶ್ರೀನಿವಾಸ ಹುಲ್ಲೂರು, ಮಹಾಂತೇಶ ನಾಲ್ವಾಡದ, ಬಸವರಾಜ ಸಂಗನಬಶೆಟ್ಟರ, ಸಂಗಪ್ಪ ಮಸಲವಾಡ, ಬಸವರಾಜ ಶಿವಶಿಂಪರ, ಸಂತೋಷ ವಾಲಿ, ಬಸವರಾಜ ಬಂಡಿ, ವೀರಪ್ಪ ಬಾರಕೇರ, ರವೀಂದ್ರ ಮುಗಳಿ, ಹನುಮಂತ ಭಜಂತ್ರಿ, ರುದ್ರಪ್ಪ ಬೂದಿಹಾಳ, ಪ್ರವೀಣ ಗಾಣಿಗೇರ, ಶೇಖಣ್ಣ ಆದಿ, ರಾಜು ಮಸಲವಾಡ, ಶಿವು ಮೇಟಿ, ಪರಮೇಶ ಬಂಡಿವಡ್ಡರ, ದಾದಾಸಾಹೇಬ್ ನಮಾಜಿ ಸೇರಿದಂತೆ ಗ್ರಾಮದ ಸಕಲ ಸದ್ಭಕ್ತರು ಉಪಸ್ಥಿತರಿದ್ದರು.

SATYAMITHI KANNADA DAILY MORNING OWNER, PUBLISHER, BY: CHANNAVEERAPPA NINGAPPA SAMAGANDI PUBLISHED FROM: KELAGAL{ETH, NEAR BASAVESHWAR DEVASTAN, HOME NO. 169, WARD NO, 4 MAIN ROAD GAJEDRAGAD, GADAG KARNATAKA - 582114 PRINTED AT: MAILARALINGESHWAR PRINTERS, WARD NO, 3, SUDI TQ, GAJENDRAGAD, GADAG, KARNATAKA- 582114